ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 34 ಆಗಸ್ಟ್ 23, 1981 ಬೆಲೆ : 60 ಪೈಸೆ

ಮತ್ತೆ ಗಡಿಪ್ರಶ್ನೆ

ಸಂಪಾದಕೀಯ

ಬಹಳ ದೀರ್ಘ ಕಾಲದಿಂದ ಹಾಗೆಯೇ ಉಳಿದಿರುವ ಮಹಾರಾಷ್ಟ್ರ-ಕರ್ನಾಟಕ ರಾಜ್ಯಗಳ ಗಡಿವಿವಾದಕ್ಕೆ ತಕ್ಷಣದ ಪರಿಹಾರ ಕೊಡಬೇಕೆಂದು ಒತ್ತಾಯಿಸಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಕರ್ನಾಟಕ ರಾಜ್ಯದ ಐದು ಜನ ಶಾಸಕರು ಮುಂಬಯಿಯಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್ ಸೇರುವ ಸಂದರ್ಭದಲ್ಲಿ ಅನಿರ್ದಿಷ್ಟಕಾಲದ ಅನ್ನಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಅಖಿಲಭಾರತ ಮರಾಠಾ ಮಹಾಸಂಘದ ನೂರಾರು ಸ್ವಯಂಸೇವಕರು ಕರ್ನಾಟಕದ ಈ ಐವರು ಶಾಸಕರ ಬೇಡಿಕೆಗಳಿಗೆ ಬೆಂಬಲ ಸೂಚಿಸಿ ಸರದಿ ಸತ್ಯಾಗ್ರಹ ಪ್ರಾರಂಭಿಸಿರುವರು. ಶಿವಸೇನೆ, ಪಿ.ಡಬ್ಲ್ಯೂ.ಪಿ. (ರೈತ ಕಾರ್ಮಿಕರ ಪಕ್ಷ), ಶರದ್‌ಪವಾರ್ ನೇತೃತ್ವದಲ್ಲಿರುವ ಕಾಂಗ್ರೆಸ್ (ಯು)ನ ಮಹಾರಾಷ್ಟ್ರ ಘಟಕ ಮತ್ತು ಇನ್ನೂ ಕೆಲವು ವಿರೋಧ ಪಕ್ಷಗಳು ಹಾಗೂ ಸಂಘಟನೆಗಳು ಸತ್ಯಾಗ್ರಹದಲ್ಲಿರುವ ಶಾಸಕರ ಬೇಡಿಕೆಗೆ ಬೆಂಬಲ ಸೂಚಿಸಿರುವ ವರದಿಯಾಗಿದೆ.

ಇತ್ತ, ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ಚಳುವಳಿಗಾರರು ಮತ್ತು ಇನ್ನು ಕೆಲವು ಸಂಘಟನೆಗಳು ತೀರ್ಮಾನವಾಗಿರುವ ಗಡಿಪ್ರಶ್ನೆಯನ್ನು ಮತ್ತೆ ಎತ್ತಲೇಬಾರದು ಎಂದು ಒತ್ತಾಯಿಸಿದ್ದಾರೆ. ಬೆಳಗಾವಿ ಪ್ರದೇಶದ ಕೆಲವು ಶಾಸಕರು ಮತ್ತು ಕಾಸರಗೋಡು ಪ್ರದೇಶದ ಮಾಜಿ ಶಾಸಕರೂ ಸೇರಿದಂತೆ ಕೆಲವು ಮುಂದಾಳುಗಳು ವಾಟಾಳ್ ನಾಗರಾಜ್ ಅವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರನ್ನು ಭೆಟ್ಟಿಯಾದ ವರದಿಯಾಗಿದೆ. ಗಡಿ ಪ್ರಶ್ನೆಯನ್ನು ಮತ್ತೆ ಎತ್ತುವುದನ್ನು ತಾನು ವಿರೋಧಿಸುವುದಾಗಿಯೂ, ಮಹಾಜನವರದಿಯನ್ನು ಸಂಪೂರ್ಣ ಒಪ್ಪುವಂತೆ ಒತ್ತಾಯಿಸುವುದಾಗಿಯೂ ಶ್ರೀ ಗುಂಡೂರಾವ್ ಅವರು ಭರವಸೆ ಇತ್ತ ವರದಿಯಾಗಿದೆ. ಆದರೆ ಗಡಿ ಪ್ರಶ್ನೆಯನ್ನು ಕೆದಕುವುದರಲ್ಲಿ ಎಲ್ಲರಿಗಿಂತಲೂ ಹೆಚ್ಚಿನ ಉತ್ಸಾಹವನ್ನು ಈ ಮೊದಲು, ಅಂದರೆ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದ ಮೇಲೆ, ಗುಂಡೂರಾವ್ ಅವರೇ ತೋರಿಸಿದ್ದರು ಎಂಬುದನ್ನು ನೆನಪುಮಾಡಿಕೊಳ್ಳಬೇಕು.

ಬೇರೆ ಬೇರೆ ಭಾಷಾ-ಸಂಸ್ಕೃತಿಗಳಿಂದ ಕೂಡಿದ ಬೇರೆಬೇರೆ ರಾಷ್ಟ್ರೀಯತೆಗಳನ್ನೊಳಗೊಂಡ ಭಾರತ ದೇಶದಲ್ಲಿ ಭಾಷಾವಾರಾಗಿ ರಾಜ್ಯಗಳ ವಿಂಗಡನೆಯಾಗುವ ಮೊದಲು ಮತ್ತು ಭಾಷಾವಾರಾಗಿ ವಿಂಗಡನೆಯಾದ ಮೇಲೂ ರಾಜ್ಯಗಳ ಗಡಿನಾಡುಗಳಲ್ಲಿ ಭಾಷಾಸಮಸ್ಯೆ ತಲೆದುಬಂದಿದೆ. ಈ ಸಮಸ್ಯೆಗೆ ಇಡೀ ದೇಶದ ಮಟ್ಟದಲ್ಲಿ ಅಳವಡಿಸಲು ಸಾಧ್ಯವಾಗುವಂತಹ ಒಂದು ವೈಜ್ಞಾನಿಕ ಸೂತ್ರದ ಮೂಲಕ ಪರಿಹಾರ ಕಂಡುಹಿಡಿಯಬೇಕೇ ಹೊರತು ರಾಜ್ಯಮಟ್ಟದಲ್ಲಲ್ಲ. ಯಾವುದೇ ಪರಿಹಾರವನ್ನು ಹುಡುಕಿದರೂ ಒಂದಲ್ಲ ಒಂದು ಭಾಷೆಯವರು ಸ್ವಲ್ಪ ಮಟ್ಟಿಗಾದರೂ ಇನ್ನೊಂದು ಭಾಷೆಯ ಜನತೆಯೊಂದಿಗೆ ಹೊಂದಿಕೊಂಡು ಬಾಳಲು ಕಲಿಯಲೇಬೇಕು. ಸದ್ಯದ ಪರಿಸ್ಥಿತಿಯಲ್ಲಿ ಗಡಿ ಪ್ರಶ್ನೆಯನ್ನು ಕೆದಕುವುದರ ಉದ್ದೇಶ ಹೆಚ್ಚು ಬಾಧಿಸುತ್ತಿರುವ ಆರ್ಥಿಕ-ಸಾಮಾಜಿಕ ಸಮಸ್ಯೆಗಳ ಕಡೆಯಿಂದ ಜನತೆಯ ಗಮನವನ್ನು ಬೇರೆ ಕಡೆಗೆ ಒಯ್ಯುವುದೇ ಆಗಿದೆ. ರಾಜಕೀಯ ಪಕ್ಷಗಳು ಮತ್ತು ಸಂಘಸಂಸ್ಥೆಗಳು ವಿವೇಚನೆಯಿಂದಲೂ, ಸಂಯಮದಿಂದಲೂ ವರ್ತಿಸಿಲ್ಲವಾದರೆ ಅಪಾಯಕಾರಿ ಬೆಳವಣಿಗೆಯಾಗಬಲ್ಲುದು.

ಮುಷ್ಕರ ನಿಷೇಧ ಸುಗ್ರೀವಾಜ್ಞೆ ವಿರೋಧಿಸಿ

ಬೃಹತ್ ಮತಪ್ರದರ್ಶನ

ನ್ಯಾಷನಲ್ ಕ್ಯಾಂಪೇನ್ ಕಮಿಟಿಯ ಕರೆಯ ಮೇರೆಗೆ ಆಗಸ್ಟ್ 17 ರಂದು ರಾಜಧಾನಿಯಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳಿಗೆ ಸೇರಿದ ಸಹಸ್ರಾರು ಕಾರ್ಮಿಕರು ಭಾರೀ ಮತಪ್ರದರ್ಶನ ನಡೆಸಿದರು.

ಅಂದು (17ರಂದು) ಸಾಯಂಕಾಲ ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಕಾರ್ಮಿಕರು ಸಮಾವೇಶಗೊಂಡು ರಾಜಭವನಕ್ಕೆ ಮೆರವಣಿಗೆ ಹೊರಡಿಸಿದರು. ಬ್ಯಾಂಕ್ ನೌಕರರು, ರಾಜ್ಯ ಸರಕಾರಿ ನೌಕರರು, ಎಲ್ಲೈಸಿ, ಕೇಂದ್ರ ಸರಕಾರಿ, ಸಾರ್ವಜನಿಕ ಉದ್ದಿಮೆಗಳ, ಅನೇಕ ಫ್ಯಾಕ್ಟರಿಗಳ ಸುಮಾರು 5000 ಕಾರ್ಮಿಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಕರಾಳ ದಿನಾಚರಣೆಯ ಅಂಗವಾಗಿ ಕಪ್ಪು ಬಾವುಟಗಳನ್ನು ಹಿಡಿದಿದ್ದ ಕಾರ್ಮಿಕರು ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಘೋಷಣೆ ಕೂಗುತ್ತಿದ್ದರು.

ರಾಜಭವನದ ಎದುರು ಬಹಿರಂಗ ಸಭೆ ನಡೆಯಿತು. ಎಚ್.ಎ.ಎಲ್.ನ ಕಾರ್ಮಿಕ ನಾಯಕ ಕಾಂ. ಆನಂದ ರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಬಿ.ಎಂ.ಎಸ್.ನ ಶ್ರೀ ಶ್ವೇತಾದ್ರಿ, ಸಿ.ಐ.ಟಿ.ಯು.ವಿನ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್, ಎ. ಐ. ಟಿ.ಯು.ಸಿ.ಯ ಕಾಂ. ಎಂ. ಎಸ್. ಕೃಷ್ಣನ್, ಎಚ್.ಎಂ.ಎಸ್.ನ ಕಾಂ. ಡಿ. ರಾಜಗೋಪಾಲ್ ಕಾರ್ಮಿಕರನ್ನುದ್ದೇಶಿಸಿ ಮಾತನಾಡುತ್ತಾ ಸುಗ್ರೀವಾಜ್ಞೆ ಹಿಂತೆಗೆಯದಿದ್ದರೆ ಮುಷ್ಕರಕ್ಕಿಳಿಯಬೇಕಾದೀತೆಂದು ಎಚ್ಚರಿಸಿದರು.

ಕರ್ನಾಟಕದ ಮಾನ್ಯ ರಾಜ್ಯಪಾಲರು ಸಾಯಿಬಾಬಾ ಭಕ್ತಮಂಡಲಿಯ ಭಜನೆಗೆ ತೆರಳಿದ್ದರಿಂದ ಮನವಿ ಸ್ವೀಕರಿಸಲು ಲಭ್ಯರಿರಲಿಲ್ಲ. ಇದನ್ನು ತಿಳಿದ ಕಾರ್ಮಿಕರು ಕುಪಿತರಾಗಿ ರಾಜ್ಯಪಾಲರ ವಿರುದ್ಧವೂ ಘೋಷಣೆ ಕೂಗಿದರು.

ದೆಹಲಿಯಲ್ಲಿ

ಸಂಸತ್ತಿನ ಮುಂಗಾರು ಅಧಿವೇಶನದ ದಿನವಾದ ಆಗಸ್ಟ್ 17ರಂದು ಸಹಸ್ರ ಸಹಸ್ರ ಕಾರ್ಮಿಕರು ಸಂಸತ್ ಭವನದ ಬಳಿ ಮುಷ್ಕರ ನಿಷೇಧ ಸುಗ್ರೀವಾಜ್ಞೆಗೆ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿ ಭಾರಿ ಮತಪ್ರದರ್ಶನ ನಡೆಸಿದರು.

ವಿವಿಧ ಕಾರ್ಮಿಕ ಸಂಘಟನೆಗಳಿಗೆ ಸೇರಿದ ಹತ್ತುಸಾವಿರಕ್ಕೂ ಮಿಕ್ಕಿ ಕಾರ್ಮಿಕರು ಫಿರೋಜ್ ಷಾ-ಕೋಟ್ಲಾ ಮೈದಾನದಿಂದ ಮೆರವಣಿಗೆ ತೆಗೆದಿದ್ದರು.

ನಂತರ ಬೋಟ್ ಕ್ಲಬ್‌ನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಿ.ಐ.ಟಿ.ಯು.ನ ಪ್ರಧಾನ ಕಾರ್ಯದರ್ಶಿ ಕಾಂ. ಪಿ.ರಾಮಮೂರ್ತಿ, ಬಿ.ಎಂ.ಎಸ್., ಎಚ್.ಎಂ. ಎಸ್., ಐ.ಎನ್.ಟಿ.ಯು.ಸಿ.

[ಕಡೇ ಪುಟ ನೋಡಿ]

ತುರ್ತುಪರಿಸ್ಥಿತಿಯ ಕರಾಳ ದಿನಗಳ ಪುನರಾವರ್ತನೆ

ಮುಷ್ಕರ ನಿಷೇಧ ಅಧ್ಯಾದೇಶ

ಪುನಃ ತುರ್ತುಪರಿಸ್ಥಿತಿ ?

ತುರ್ತುಪರಿಸ್ಥಿತಿಯನ್ನು ಒಂದು ಸಾವಿರ ವರ್ಷಗಳಲ್ಲಿಯೂ ಜಾರಿಗೆ ತರುವುದಿಲ್ಲವೆಂದು ಹಿಂದೊಮ್ಮೆ ಆಶ್ವಾಸನೆ ನೀಡಿದ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದು 18 ತಿಂಗಳಲ್ಲಿಯೇ ಒಂದೊಂದಾಗಿ ಜನವಿರೋಧಿ ಹಾಗೂ ಕಾರ್ಮಿಕವಿರೋಧಿ ಕ್ರಮಗಳನ್ನೂ ಶಾಸನಗಳನ್ನೂ ಜಾರಿಗೊಳಿಸುತ್ತಿದೆ! ರಾಜ್ಯಪಾಲರ, ನ್ಯಾಯಾಧೀಶರ, ಉನ್ನತ ಅಧಿಕಾರಿಗಳ ಅನಿರೀಕ್ಷಿತ ವರ್ಗಾವಣೆ; ನ್ಯಾಯಾಂಗ ಮತ್ತು ಚುನಾವಣಾ ಆಯೋಗಗಳ ಹಕ್ಕುಗಳಲ್ಲಿ ಮತ್ತು ಪತ್ರಿಕಾ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ; ಅನುವಂಶೀಯ ಅಧಿಕಾರ ಸ್ಥಾಪನೆಗೆ ಮತ್ತು ಅಧ್ಯಕ್ಷೀಯ ಪದ್ಧತಿಗೆ ಭಾರೀ ಪ್ರಚಾರ; ವಿರೋಧ ಪಕ್ಷಗಳ, ಕಾರ್ಮಿಕಸಂಘಗಳ, ಸ್ವಪಕ್ಷೀಯ ಭಿನ್ನಮತೀಯರ ಧುರೀಣರನ್ನು ಹದ್ದುಬಸ್ತಿನಲ್ಲಿಡಲು ವಿಚಾರಣೆ ಇಲ್ಲದೆ ದಸ್ತಗಿರಿಮಾಡುವ ರಾಷ್ಟ್ರೀಯ ರಕ್ಷಣಾ ಕಾಯಿದೆ (ಎನ್. ಎಸ್. ಎ.); ಕಾಂಗ್ರೆಸ್ (ಐ) ಹೊರತಾದ ರಾಜ್ಯಸರಕಾರಗಳನ್ನು ಪದಚ್ಯುತಿಗೊಳಿಸುವ ಪಿತೂರಿ; ರೈತಕಾರ್ಮಿಕರ ಹೋರಾಟಗಳನ್ನು ನಿರ್ಲಕ್ಷಿಸುವ ಹಾಗೂ ದಮನಿಸುವ ಧೋರಣೆ; ಇತ್ಯಾದಿ, ತುರ್ತುಪರಿಸ್ಥಿತಿಯು ಮರುಕಳಿಸುತ್ತಿರುವುದನ್ನು ಸ್ಪಷ್ಟಪಡಿಸುವುವು.

ಇವೆಲ್ಲವುಗಳಿಗೂ ಮಿಗಿಲಾಗಿ, ಜುಲೈ 27 ರಂದು ಅಗತ್ಯ ಸೇವೆಗಳಲ್ಲಿ ಮುಷ್ಕರ ನಿಷೇಧಿಸುವ ಅಧ್ಯಾದೇಶವನ್ನು ಘೋಷಿಸುವ ಮೂಲಕ ಕಾರ್ಮಿಕವರ್ಗಕ್ಕೆ ತುರ್ತುಪರಿಸ್ಥಿತಿಯ ಕರಾಳ ದಿನಗಳು ಪುನಃ ಬಂದಂತಾಗಿದೆ.

ಕರಾಳ ಶಾಸನ

ಈ ಅಧ್ಯಾದೇಶವು ಆಗಸ್ಟ್ 17 ರಂದು ಪ್ರಾರಂಭವಾಗುವ ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಶಾಸನವಾಗಲಿದೆ. ಇದು ಮುಂದಿನ ಮೂರು ವರ್ಷಗಳವರೆಗೆ ಜಾರಿಯಲ್ಲಿರುವುದು. ಅಗತ್ಯವಿದ್ದರೆ, ಇನ್ನಷ್ಟು ಕಾಲ ಮುಂದುವರಿಯಬಹುದು. ಈ ಅಧ್ಯಾದೇಶದಲ್ಲಿ ಕೇಂದ್ರಸರಕಾರವು ರಕ್ಷಣಾ ಕೈಗಾರಿಕೆ, ಅಂಚೆ-ತಂತಿ, ಸಾರಿಗೆಸಂಪರ್ಕ, ವಿಮಾನ ಹಾಗೂ ಹಡಗು ನಿಲ್ದಾಣ, ಬ್ಯಾಂಕು, ತೈಲೋದ್ಯಮ, ಇತ್ಯಾದಿ 42 ಪ್ರಮುಖ ಸೇವಾಸಂಸ್ಥೆಗಳಲ್ಲಿಯೂ ಕೈಗಾರಿಕೆಗಳಲ್ಲಿಯೂ ಮುಷ್ಕರಗಳನ್ನು ನಿಷೇಧಿಸಲು ಅಧಿಕಾರಹೊಂದಿದೆ. ಅರ್ಥಾತ್, ಕೇಂದ್ರಸರಕಾರ ಸಂಸತ್ತಿನಲ್ಲಿ ಯಾವ ಕೈಗಾರಿಕೆಗಳ ಸೇವಾಸಂಸ್ಥೆಗಳ ಕುರಿತು ಶಾಸನ ಮಾಡಬಹುದೋ ಅವುಗಳಲ್ಲೆಲ್ಲಾ ಅಗತ್ಯಕಂಡಾಗ ಮುಷ್ಕರಗಳನ್ನು ನಿಷೇಧಿಸುವ ಅಧಿಕಾರ ಹೊಂದಿದೆ. (ಕಾಂಗ್ರೆಸ್(ಐ) ರಾಜ್ಯ ಸರಕಾರಗಳೂ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಸೇವಾಸಂಸ್ಥೆಗಳಲ್ಲಿಯೂ ಕೈಗಾರಿಕೆಗಳಲ್ಲಿಯೂ ಮುಷ್ಕರಗಳನ್ನು ನಿಷೇಧಿಸುವ ಇಂತಹದೇ ಶಾಸನವನ್ನು ಜಾರಿಗೆ ತರಬಹುದು) ಮುಷ್ಕರದೊಂದಿಗೆ, ನಿಧಾನಕೆಲಸ, ಓವರ್ ಟೈಂ ಕೆಲಸ ನಿರಾಕರಣೆ, ಇತ್ಯಾದಿ ಉತ್ಪಾದನೆ ವಿತರಣೆಗೆ ಅಡ್ಡಿ ಆತಂಕವಾಗುವ ಕಾರ್ಯಕ್ರಮಗಳನ್ನೂ ನಿಷೇಧಿಸಲಾಗುವುದು.

ಮುಷ್ಕರಗಳಲ್ಲಿ ಭಾಗವಹಿಸುವವರನ್ನು, ಪ್ರಚೋದಿಸುವವರನ್ನು, ಪ್ರತ್ಯಕ್ಷ ಯಾ ಅಪ್ರತ್ಯಕ್ಷವಾಗಿ ಪ್ರೋತ್ಸಾಹಿಸುವವರನ್ನು ವಿಚಾರಣೆ ಇಲ್ಲದೆ ದಸ್ತಗಿರಿ ಮಾಡಬಹುದು.

[ಕಡೇ ಪುಟ ನೋಡಿ]

ಗೂಂಡಾಗಿರಿಯನ್ನು ಪ್ರತಿಭಟಿಸಿ ಕಾರ್ಮಿಕರ ಬೃಹತ್ ಪ್ರದರ್ಶನ: ಪೋಲೀಸ್ ಠಾಣೆಗೆ ಘೆರಾವೋ

ಹುಬ್ಬಳ್ಳಿ ಗೋಕುಲ್ ರಸ್ತೆಯಲ್ಲಿರುವ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಹಲವಾರು ಸಣ್ಣ, ಪುಟ್ಟ ಕೈಗಾರಿಕೆಗಳಿವೆ. ಕನಿಷ್ಠ ವೇತನ ಸೌಲಭ್ಯವೂ ಇಲ್ಲದ ಈ ನತದೃಷ್ಟ ಅಸಂಘಟಿತ ಕಾರ್ಮಿಕರು ಈಗ ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿತರಾಗುತ್ತಿದ್ದಾರೆ. ಹೀಗೆ ಹೊಸದಾಗಿ ಸಂಘಟನೆಯನ್ನು ಕಟ್ಟಿರುವ "ವಿಜಯಾ ಮೆಟಲ್ ವರ್ಕ್ಸ್"ನ ಕಾರ್ಮಿಕರು ಬೇಡಿಕೆಗಳನ್ನು ಇಡುವ ಮೊದಲೇ ಮಾಲೀಕರು ಅಕ್ರಮ ವಜಾ, ಗೂಂಡಾದಾಳಿಗಳ ಮೂಲಕ ಸಂಘಟನೆಯನ್ನು ಒಡೆಯಲು ಪ್ರಯತ್ನಿಸುತ್ತಿದ್ದಾರೆ. ಈ ಮಾಲೀಕರಿಗೆ ಬೆಂಬಲವಾಗಿ ಉಳಿದ ಮಾಲೀಕರೂ ಜೊತೆಗೂಡಿ ಇಡೀ ಕೈಗಾರಿಕಾ ಎಸ್ಟೇಟ್‌ನಲ್ಲಿ ಯಾವ ಕಾರ್ಮಿಕ ಸಂಘಟನೆಯೂ ತಲೆ ಎತ್ತದಂತೆ ಮಾಡಬೇಕೆನ್ನುವ ಪಿತೂರಿಯನ್ನು ಯೋಜಿಸಿದ್ದಾರೆ. ಇದರ ಅಂಗವಾಗಿ ವಿಜಯಾ ಮೆಟಲ್ ವರ್ಕ್ಸ್‌ನ ಹದಿನಾಲ್ಕು ಜನ ಕಾರ್ಮಿಕರ ಮೇಲೆ ಮಾಲೀಕರ ಗೂಂಡಾಗಳು ಅಮಾನುಷ ಹಲ್ಲೆ ನಡೆಸಿದ್ದಾರೆ, ಹಲವಾರು ಕಾರ್ಮಿಕರು ಆಸ್ಪತ್ರೆ ಸೇರಿದ್ದಾರೆ. ಇಷ್ಟಾದರೂ ಎಸ್ಟೇಟ್‌ನಲ್ಲಿಯೇ ಇರುವ ಪೋಲೀಸ್ ಠಾಣೆ ಅಧಿಕಾರಿಗಳಿಗೆ ಸ್ವಲ್ಪವೂ ಕಾಳಜಿ ಇಲ್ಲದೆ ಮೌನಪ್ರೇಕ್ಷಕರಂತೆ ಕುಳಿತಿದ್ದರು.

ಪೋಲೀಸರ ನಿಷ್ಕ್ರಿಯತೆ ಮತ್ತು ಗೂಂಡಾಗಳ ದೌರ್ಜನ್ಯವನ್ನು ಪ್ರತಿಭಟಿಸಿ ತಾ. 12-8-81ರಂದು ಹುಬ್ಬಳ್ಳಿಯ ಮೈಸೂರು ಕಿರ್ಲೋಸ್ಕರ್, ಕಿರ್ಲೋಸ್ಕರ್ ಎಲೆಕ್ಟ್ರಿಕಲ್ಸ್, ನಗರ ಕಾರ್ಮಿಕ ಸಂಘ, ಸುಂದರ ತಾ ಆಯಿಲ್ ಮಿಲ್, ಸತ್ತೂರು ಮೈಸೂರು ಕಿರ್ಲೋಸ್ಕರ್ ಹಾಗೂ ಇತರೆ ಕಾರ್ಖಾನೆಗಳ ಕಾರ್ಮಿಕರು ಸಹಸ್ರಾರು ಸಂಖ್ಯೆಯಲ್ಲಿ ಮೆರವಣಿಗೆ ಹೊರಟು ಗೋಕುಲ್ ಪೋಲೀಸ್ ಠಾಣೆಯನ್ನು ಘೆರಾವೋ ಮಾಡಿದರು. ಸುಮಾರು ಎರಡು ಗಂಟೆಗಳ ಕಾಲ ಘೆರಾವೋ ನಡೆದ ನಂತರ ಕಾರ್ಮಿಕ ಶಕ್ತಿಯ ಒತ್ತಾಯಕ್ಕೆ ಮಣಿದು ಧಾರವಾಡದಿಂದ ಜಿಲ್ಲಾ ಪೋಲೀಸ್ ಸೂಪರಿಂಟೆಂಟ್‌ರವರು ಸ್ಥಳಕ್ಕೆ ಬಂದರು. ಕಾರ್ಮಿಕ ಮುಖಂಡರೊಂದಿಗೆ ಮಾತುಕತೆ ನಡೆಸಿದ ನಂತರ, ಅವರೇ ಕಾರ್ಮಿಕರ ಮುಂದೆ ಬಂದು, ನಡೆದಿರುವ ಘಟನೆಗಳ ಬಗ್ಗೆ ತಮಗೆ ಮಾಹಿತಿ ಇರಲಿಲ್ಲವಾದ್ದರಿಂದ ಹೀಗಾಗಿದೆ, ಅಪರಾಧಿಗಳು ಎಂತಹ ದೊಡ್ಡ ವ್ಯಕ್ತಿಗಳಾದರೂ, ಕೂಡಲೇ ತನಿಖೆ ನಡೆಸಿ ಅಂತಹವರನ್ನು ಶಿಕ್ಷಿಸುವುದಾಗಿ ಭರವಸೆ ನೀಡಿದರು. ಇಡೀ ಕಾರ್ಯಕ್ರಮದ ನೇತೃತ್ವವನ್ನು ಸಿ.ಐ.ಟಿ.ಯು. ಮುಖಂಡರಾದ ಕಾಂ. ಆರ್. ಜಿ. ಸ್ಥಳೀಕರ್, ಕಾಂ. ವಿ.ಜೆ.ಕೆ. ನಾಯರ್ ಹಾಗೂ ಕಾಂ. ಹಳಕಟ್ಟಿ ಮುಂತಾದವರು ವಹಿಸಿದ್ದರು. ನಂತರ ಬಂದ ಸುದ್ದಿಯ ಪ್ರಕಾರ ಈಗಾಗಲೇ ಗೂಂಡಾಗಳನ್ನು ಬಂಧಿಸಿ, ವಿಚಾರಣೆಯನ್ನು ಮುಂದುವರಿಸಲಾಗುತ್ತಿದೆ. ಕಾರ್ಮಿಕರ ಐಕ್ಯತೆ, ಹೋರಾಟಗಳಿಗೆ ಇದರಿಂದ ಹೊಸ ಚೈತನ್ಯ ಸಿಕ್ಕಿದಂತಾಗಿದೆ. ಹುಬ್ಬಳ್ಳಿ ಕಾರ್ಮಿಕರು ಇದರಿಂದ ಸಿ.ಐ.ಟಿ.ಯು. ನಾಯಕತ್ವದ ಬಗ್ಗೆ ತಮಗಿದ್ದ ಭರವಸೆಯನ್ನು ಮತ್ತೊಮ್ಮೆ ಸ್ಪಷ್ಟಗೊಳಿಸಿಕೊಂಡಿದ್ದಾರೆ.

o

ವಿದ್ಯಾರ್ಥಿ ಸಂಘಗಳ ಚುನಾವಣೆ ರದ್ದು -ಎಸ್.ಎಫ್.ಐ., ಡಿ.ವೈ.ಎಫ್.ಐ. ಖಂಡನೆ

12-8-81ರಂದು ಮೈಸೂರಿನಲ್ಲಿ ಕರೆಯಲಾಗಿದ್ದ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ಮತ್ತು ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿ. ವೈ. ಎಫ್. ಐ.) ಯ ಜಂಟಿ ಸಭೆಯು ದೇಶದಲ್ಲಿ ಜನರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಹಾಗೂ ಸಂಘಟನೆಗಳ ಮುಖಂಡರ ಮೇಲೆ ನಡೆಯುತ್ತಿರುವ ಸರ್ವಾಧಿಕಾರಿ ಶಕ್ತಿಗಳ ಧಾಳಿಯನ್ನು ತೀವ್ರವಾಗಿ ಖಂಡಿಸಿತು.

ರಾಜ್ಯ ಎಸ್. ಎಫ್. ಐ. ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಹಾಗೂ ಇತರ ಎಸ್. ಎಫ್. ಐ. ಕಾರ್ಯಕರ್ತರ ಮೇಲೆ ಆಗಸ್ಟ್ 5ರಂದು ಹೊಸಪೇಟೆಯ ಪೋಲೀಸ್ ಅಧಿಕಾರಿಗಳು ನಡೆಸಿದ ಅಮಾನುಷ ದೌರ್ಜನ್ಯವನ್ನು ಖಂಡಿಸಿದ ಸಭೆಯು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಲು ಒತ್ತಾಯಿಸಿತು.

ಹೆಸರಾಂತ ಇತಿಹಾಸಕಾರರಾದ ಅಲಿಗರ್ ಮುಸ್ಲಿಂ ವಿಶ್ವವಿದ್ಯಾಲಯದ ಪ್ರೊ. ಇರ್‌ಫನ್ ಹಬೀಬರನ್ನು ಜಾತೀಯವಾದಿಗಳ ಒತ್ತಾಯಕ್ಕೆ ಮಣಿದು ಅಮಾನತುಗೊಳಿಸಿದ ಅಲ್ಲಿನ ಉಪಕುಲಪತಿಗಳ ನಿರ್ಧಾರವನ್ನು ತೀವ್ರವಾಗಿ ಖಂಡಿಸಿದ ಸಭೆಯು ಹಬೀಬರ ಮೇಲಿನ ವಜಾ ಆಜ್ಞೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಹೋರಾಡಲು ಎಲ್ಲಾ ಎಡ, ಪ್ರಜಾಪ್ರಭುತ್ವವಾದಿ ಸಂಘಟನೆಗಳಿಗೆ ಕರೆ ನೀಡಿತು.

ಮೈಸೂರು ವಿಶ್ವವಿದ್ಯಾಲಯವೂ ಸೇರಿದಂತೆ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಸಂಘಗಳ ಚುನಾವಣೆಯನ್ನು ನಿಷೇಧಿಸಿರುವುದನ್ನು ವಿದ್ಯಾರ್ಥಿಗಳ ಪ್ರಜಾಪ್ರಭುತ್ವ ಹಕ್ಕುಗಳ ಮರ್ದನವೆಂದು ಪರಿಗಣಿಸಿದ ಸಭೆಯು ಇದರ ವಿರುದ್ಧ ಹೋರಾಡುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿತು.

ಸಭೆಯನ್ನುದ್ದೇಶಿಸಿ ರಾಜ್ಯ ಎಸ್. ಎಫ್. ಐ. ಅಧ್ಯಕ್ಷರಾದ ಆರ್. ಜಯಕುಮಾರ್ ಮತ್ತು ಮೈಸೂರು ಡಿ. ವೈ. ಎಫ್. ಐ. ಸಂಚಾಲಕರಾದ ಮೋಹನ್‌ಕುಮಾರ್ ಮಾತನಾಡಿದರು. o

ಪದಾಧಿಕಾರಿಗಳ ಆಯ್ಕೆ

18-7-81ರಂದು ಬೆಂಗಳೂರಿನ ಕೃಷ್ಣರಾಜ್‌ಪುರದಲ್ಲಿರುವ ಇಂಡಿಯಾ ಟಿನ್ ಇಂಡಸ್ಟ್ರೀಸ್ ಕಾರ್ಮಿಕ ಸಂಘದ ಚುನಾವಣೆ ನಡೆಯಿತು. ಕಾರ್ಮಿಕಸಂಘದ ಅಧ್ಯಕ್ಷರಾಗಿ ಕಾಂ. ಸೂರ್ಯನಾರಾಯಣರಾವ್ ಪುನರಾಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಕಾಂ. ಪ್ರತಾಪ್ ಸಿಂಗ್, ಪ್ರಧಾನಕಾರ್ಯದರ್ಶಿಯಾಗಿ ಕಾಂ. ಎನ್. ಕೃಷ್ಣಯ್ಯ, ಸಹಕಾರ್ಯದರ್ಶಿಯಾಗಿ ಎಸ್. ಅಶ್ವಥ, ಖಜಾಂಚಿಯಾಗಿ ಎಸ್. ಜಯಪತಿಯವರು ಆಯ್ಕೆಯಾಗಿದ್ದಾರೆ.

ಪ್ಲೈವುಡ್ ಕಾರ್ಮಿಕರಿಗೆ ವೇತನದಲ್ಲಿ ಹೆಚ್ಚಳ

ದ.ಕ. ಜಿಲ್ಲೆಯಲ್ಲಿ ಇಂಡಿಯನ್ ಪ್ಲೈವುಡ್ ಮ್ಯಾನುಫೇಕ್ಚರಿಂಗ್ ಕಂಪನಿಯ ಎರಡು ಕಾರ್ಖಾನೆಗಳು ನಿಟ್ಟೂರು ಮತ್ತು ಹುಂಗಾರಕಟ್ಟೆಯಲ್ಲಿವೆ. ಈ ಎರಡು ಪ್ಲೈವುಡ್ ಕಾರ್ಖಾನೆಗಳ ಕಾರ್ಮಿಕರು ಸಿ.ಐ.ಟಿ.ಯು.ವಿನ ನೇತೃತ್ವದ ಸೌತ್ ಕೆನರಾ ಡಿಸ್ಟ್ರಿಕ್ಟ್ ಪ್ಲೈವುಡ್ ವರ್ಕರ್ಸ್ ಯೂನಿಯನ್, ಕುಂದಾಪುರ-ಇದರ ಸದಸ್ಯರಾಗಿರುತ್ತಾರೆ. ಅತೀ ಕಡಿಮೆ ವೇತನದಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಸಂಘಟಿತರಾಗಿ, ಈ ಹಿಂದೆ ಹಲವು ಹೋರಾಟಗಳನ್ನು ನಡೆಸಿ, ವೇತನವನ್ನು ಹೆಚ್ಚು ಮಾಡಿಕೊಂಡಿರುತ್ತಾರೆ.

ಈ ಹಿಂದಿನ ಒಪ್ಪಂದದ ಅವಧಿ ತಾರೀಕು 31-12-1981 ರವರೆಗೆ ಇರುವಾಗಲೇ, ಮಧ್ಯಾವಧಿ ಪರಿಹಾರ ಸಿಗಬೇಕೆಂದು ಕೇಳಿಕೆಯನ್ನು ಮಾಲಕರಿಗೆ ಕಳುಹಿಸಲಾಗಿತ್ತು. ಮಧ್ಯಾವಧಿ ಪರಿಹಾರ ಕೊಡಲು ಮಾಲಕರು ಒಪ್ಪದಿದ್ದ ಕಾರಣ ಕೆಲವು ಹೋರಾಟದ ಕ್ರಮಗಳನ್ನು ಅನುಸರಿಸಲಾಯಿತು. ಆನಂತರ ಮೆನೇಜ್‌ಮೆಂಟ್ ಮಾತುಕತೆಗೆ ಕರೆದು, 2 ವರ್ಷಕ್ಕೆ ಈ ಹಿಂದಿನ ಒಪ್ಪಂದದ ಅವಧಿಯನ್ನು ವಿಸ್ತರಿಸಿ, ಒಂದು ಹೊಸ ಒಪ್ಪಂದಕ್ಕೆ ತಯಾರಾದಾಗ, ಹೊಸ ಕೇಳಿಕೆಯನ್ನು ಮುಂದಿಡಲಾಯಿತು. ಮಾತುಕತೆ ನಡೆದು ತಿಂಗಳಿಗೆ ರೂ. 40/-ನ್ನು ಮೊದಲನೆಯ ವರ್ಷ (1982)ಕ್ಕೆ ಹಾಗೂ ತಿಂಗಳಿಗೆ ರೂ. 20/-ನ್ನು ಎರಡನೆಯ ವರ್ಷ (1983)ಕ್ಕೆ ಹೆಚ್ಚಿಗೆ ಪಡೆಯಲು ಸಾಧ್ಯವಾಯಿತು. 1981ರಲ್ಲಿ ಒಟ್ಟು 7 ತಿಂಗಳು ಅಂದರೆ ಜೂನ್ ತಿಂಗಳಿಂದ ಹೊಸ ಒಪ್ಪಂದದಲ್ಲಿ ಸಿಕ್ಕಿದ ರೂ. 40/- ಪ್ರತಿ ತಿಂಗಳು ಹೆಚ್ಚಿಗೆ ಸಿಗುವಂತಾಗಿದೆ.

ತಾ. 1-6-1978ರಲ್ಲಿ ಸರಕಾರವು ಪ್ಲೈವುಡ್ ಕಾರ್ಮಿಕರಿಗೆ ನಿರ್ಣಯವಾದ ಕನಿಷ್ಠ ವೇತನವು ಹೈಕೋರ್ಟಿನಿಂದ "ತಡೆಯಾಜ್ಞೆ" ಮೂಲಕ ಜಾರಿಯಾಗದೇ ತಡೆಹಿಡಿಯಲ್ಪಟ್ಟಿತ್ತು. ಮಾಲಕರು "ರಿಟ್‌ಅರ್ಜಿ" ಫೈಲು ಮಾಡಿದ್ದರು. ಇತ್ತೀಚೆಗೆ "ತಡೆಯಾಜ್ಞೆ" ರದ್ದಾಗಿದ್ದು, ಮಾಲಕರು ಮುಂದೆ 'ಅಪೀಲಿಗೆ' ಹೋಗುವ ಸಿದ್ಧತೆಯಲ್ಲಿ ಇರುವಾಗಲೇ ಒತ್ತಾಯದ ಪರಿಣಾಮವಾಗಿ ನಿಗದಿಯಾದ ಕನಿಷ್ಠ ವೇತನ 1-6-1978ರಿಂದಲೇ ಜಾರಿಗೊಳಿಸಬೇಕೆಂದು ಮ್ಯಾನೇಜ್‌ಮೆಂಟನ್ನು ಒಪ್ಪಿಸಲಾಯಿತು. ಈ ರೀತಿ ಕಾರ್ಮಿಕರಿಗೆ ಹೆಚ್ಚಿನವರಿಗೆ ಹೆಚ್ಚಿನ ಈ ಹಿಂದಿನ ಸೌಲತ್ತು ಸಿಗುವಂತಾಗಿದೆ.

ಒಪ್ಪಂದಕ್ಕೆ ಸೌತ್ ಕೆನರಾ ಡಿಸ್ಟ್ರಿಕ್ಟ್ ಪ್ಲೈವುಡ್ ವರ್ಕರ್ಸ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿಯವರಾದ ಕಾಂ. ಕೆ. ಶಂಕರ್, ಅಧ್ಯಕ್ಷರಾದ ಕಾಂ. ಕೆ. ಮುಸಬ್ಬ ಹಾಗೂ ಸಮಿತಿ ಸದಸ್ಯರಾದ ಕಾಂ. ವಿಠಲ್, ಕಾಂ. ಶಂಕರ ಶೆಟ್ಟಿಗಾರ್, ಕಾಂ. ವಿ. ಜೆ. ಜೋಯಿ ಮತ್ತು ಕಾಂ. ಗಂಗಾಧರ ಗೌಡ-ಇವರು ಸಹಿ ಹಾಕಿರುತ್ತಾರೆ. ದ. ಕ. ಜಿಲ್ಲಾ ಸಿ.ಐ.ಟಿ.ಯು.ವಿನ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರ ರಾವ್‌ರವರು ಈ ಮಾತುಕತೆಯಲ್ಲಿ ಉಪಸ್ಥಿತರಿದ್ದು, ಅವರೂ ಕೂಡಾ ಒಪ್ಪಂದಕ್ಕೆ ಸಹಿ ಹಾಕಿರುತ್ತಾರೆ. ಈ ಹಿಂದಿನ ಎಲ್ಲಾ ಒಪ್ಪಂದದಲ್ಲಿ ಸಿಕ್ಕಿದ ವೇತನಕ್ಕಿಂತಲೂ ಈ ಒಪ್ಪಂದದಲ್ಲಿ ಕಾರ್ಮಿಕರಿಗೆ ಹೆಚ್ಚಿಗೆ ಸೌಲತ್ತು ಸಿಕ್ಕುತಾಗಿದೆ.

o

ಶಿರ್ಸಿಯಲ್ಲಿ ಧರಣಿ ಸತ್ಯಾಗ್ರಹ

ಉತ್ತರ ಕನ್ನಡ ಜಿಲ್ಲೆಯ ಜನರಿಗೆ ಪ್ರಸಕ್ತ ಕೊಡುತ್ತಿರುವ ಆಹಾರಧಾನ್ಯಗಳ ರೇಷನ್ ಪ್ರಮಾಣವನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿ ಶಿರ್ಸಿಯ ಅಸಿಸ್ಟೆಂಟ್ ಕಮೀಷನರವರಿಗೆ 8-7-81ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪರವಾಗಿ ಮನವಿ ಸಲ್ಲಿಸಲಾಗಿತ್ತು.

ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲವಾದ್ದರಿಂದ 10-8-81ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಕಾಂ. ಮುಂಜುನಾಥ ಪುಲಕರರ ನೇತೃತ್ವದಲ್ಲಿ ಶಿರ್ಸಿಯ ಅಸಿಸ್ಟಂಟ್ ಕಮೀಷನರರ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

ಈ ಸಂದರ್ಭದಲ್ಲಿ ಮುಷ್ಕರಗಳನ್ನು ನಿಷೇಧಿಸುವ ರಾಷ್ಟ್ರಪತಿಯವರ ಸುಗ್ರೀವಾಜ್ಞೆಯನ್ನು ಖಂಡಿಸಲಾಯಿತು.

●

ಶಿವಮೊಗ್ಗದಲ್ಲಿ ಭಾರೀ ಸಭೆ

ಶಿವಮೊಗ್ಗದ ಟ್ರೇಡ್‌ಯೂನಿಯನ್ ಕೋ-ಆರ್ಡಿನೇಷನ್ ಕಮಿಟಿಯ ಆಶ್ರಯದಲ್ಲಿ ಶಿವಮೊಗ್ಗದಲ್ಲಿ 5-8-81ರಂದು ಭಾರೀ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಅಂಚೆ ಮತ್ತು ತಂತಿ, ಎಲ್ಲೈಸಿ, ಬ್ಯಾಂಕು, ಕೆ.ಇ.ಬಿ. ಜೆಡಿಸಿ, ರೈಸ್‌ಮಿಲ್ ಕಾರ್ಮಿಕರು ಬೃಹತ್ ಮೆರವಣಿಗೆ ಹೊರಡಿಸಿ ಅಗತ್ಯ ಸೇವಾ ಸುಗ್ರೀವಾಜ್ಞೆಯನ್ನು ವಾಪಸ್ ತೆಗೆದುಕೊಳ್ಳಲು ಒತ್ತಾಯಿಸಿದರು.

ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕೋ-ಆರ್ಡಿನೇಷನ್ ಕಮಿಟಿಯ ಅಧ್ಯಕ್ಷರಾದ ಕಾಂ. ಬಿ. ಸೋಲೋಮನ್ ವಹಿಸಿದ್ದರು. ಆರಂಭದಲ್ಲಿ ಕಾಂ. ಭೂಪೇಶ್‌ಗುಪ್ತರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಲಾಯಿತು.

ಎಐಬಿಇಯು ನ ಕಾಂ. ಗಣೇಶ್, ಪಿ. ಅಂಡ್ ಟಿ. ಯ ಕಾಂ. ವಿ. ಜೆ. ಜಯರಾಮ್, ಠೇವಣಿ ಸಂಗ್ರಹಕಾರರ ಸಂಘದ ಕಾಂ. ಚಂದ್ರಶೇಖರ, ಎಐಇಇಯು ನ ಕಾಂ. ಮಹಾಬಳೇಶಪ್ಪಾ, ಪಿ. ಅಂಡ್ ಟಿ. ಯ ಕಾಂ. ಎಸ್. ರಮೇಶ್, ಕೆಇಬಿ ಯ ಕಾಂ. ಹಳದಪ್ಪ ಮೊದಲಾದವರು ಮಾತನಾಡಿ ಕೇಂದ್ರಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿದರು.

ಕೊನೆಯಲ್ಲಿ ಕೋ-ಆರ್ಡಿನೇಷನ್ ಕಮಿಟಿಯ ಜಂಟಿಕಾರ್ಯದರ್ಶಿ ಕಾಂ. ಎಸ್. ಎಸ್. ಮಂಜುನಾಥರು ವಂದನೆ ಸಲ್ಲಿಸಿದರು.

o

ಕರ್ನಾಟಕ ರಾಜ್ಯದಲ್ಲಿ

ಎನ್ಕೆ

ಪರಾರಿಯಾಗಿರುವ ಎಫ್. ಎಂ. ಖಾನ್

ರಾಮನಗರದ ಮ್ಯಾಜಿಸ್ಟ್ರೇಟರು 21-1-1972 ರಲ್ಲೊಂದು ಆಜ್ಞೆ ಹೊರಡಿಸಿ "ಯುವಕ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಎಫ್. ಎಂ. ಖಾನ್ ಇವರು ಪರಾರಿಯಾಗಿದ್ದಾರೆ" ಎಂಬ ಆಜ್ಞೆ ಹೊರಡಿಸಿದ್ದರು. ಹತ್ತು ವರ್ಷ ಕಳೆದರೂ ಪೋಲೀಸರು ಈ ಮನುಷ್ಯನನ್ನು ಹಿಡಿದು ಕೋರ್ಟಿಗೆ ಹಾಜರುಪಡಿಸಿಲ್ಲ.

ಎಫ್. ಎಂ. ಖಾನ್ ಸಂಜಯ ಗಾಂಧಿಯ ಆತ್ಮೀಯ ಶಿಷ್ಯ. ಇಂದಿರಾ ಗಾಂಧಿಯ ನಿಕಟ ಸೇವಕ, ವಿಶ್ವಾಸಿಕ, ರಾಜ್ಯದ ಮುಖ್ಯಮಂತ್ರಿ ಗುಂಡೂರಾಯರ ಗುರು, ರಾಜ್ಯಸಭೆ ಸದಸ್ಯ, ಇಂದಿರಾ ಕಾಂಗ್ರೆಸ್ ಲೋಕಸಭೆ ಪಕ್ಷದ ಕೋಶಾಧಿಕಾರಿ, ಕರ್ನಾಟಕ ರಾಜ್ಯದ ಐ.ಎನ್.ಟಿ.ಯು.ಸಿ.ಯ ಅಧ್ಯಕ್ಷ. ಇತ್ತೀಚೆಗೆ ಕುಡಿದು ನಿಶೆಯಲ್ಲಿ ಬೆಂಗಳೂರು ಪೋಲೀಸ್ ಕಮೀಷನರ್ ನಿಜಾಮುದ್ದೀನರ ಅಂಗಿ ಹಿಡಿದು ಹೊಡೆದಾಡಿದ ವ್ಯಕ್ತಿ, ಅದು ಕೂಡ ಪೋಲೀಸ್ ಸ್ಟೇಷನ್ನಿನಲ್ಲೇ, ಎಲ್ಲ ಪೋಲೀಸರ ಸಮಕ್ಷಮ. ಗುಂಡೂರಾಯರ ಬೆನ್ನೆಲುಬಾಗಿ ನಿಂತು ಮಂತ್ರಿ ಇಬ್ರಾಹಿಂರನ್ನು ಸಂರಕ್ಷಣೆ ಮಾಡಿದ ಮಹಾಶಯ. ಮೈಕೋ ಕಾರ್ಖಾನೆಯ ಬಹುಸಂಖ್ಯೆ ಕಾರ್ಮಿಕರ ವಿರುದ್ಧ ಕೆಲವೇ ಗುಂಡಾ ಜನರನ್ನು ಕಟ್ಟಿಕೊಂಡು ಪೋಲೀಸರ ಸಹಾಯದಿಂದ ಯೂನಿಯನ್ ಆಫೀಸ್ ವಶಪಡಿಸಿಕೊಂಡು, ಯೂನಿಯನ್ ಚುನಾವಣೆ ನಡೆಸದೆ, ತಾನೇ ಅಧ್ಯಕ್ಷನೆಂದು ಜಾಹೀರಪಡಿಸಿಕೊಂಡು ಕಾರ್ಮಿಕರ ಮೇಲೆ ಅನ್ಯಾಯ-ಅತ್ಯಾಚಾರ ನಡೆಸುತ್ತಿರುವ ವ್ಯಕ್ತಿ.

ಕಳೆದ ಹತ್ತು ವರ್ಷಗಳಿಂದಲೂ ಎಫ್. ಎಂ. ಖಾನ್ ಪೋಲೀಸರ ದೃಷ್ಟಿಗೆ ಕಾಣಿಸಿಲ್ಲ, ಈಗಲೂ ಕಾಣಿಸುತ್ತಿಲ್ಲ. ಎಫ್. ಎಂ. ಖಾನ್ ತಲೆಮರೆಸಿಕೊಂಡಿದ್ದಾರೆ ಇಂದಿರಾ ರಾಜ್ಯದ ಪೋಲೀಸ್ ಆಡಳಿತೆಯಲ್ಲಿ.

ಪೋಲೀಸ್ ಕಮೀಷನರ್ ನಿಜಾಮುದ್ದೀನ್ ಖಾನ್ ಅವರಿಂದ ಅವಮಾನಿಸಿಕೊಂಡಾಗ ಖಾನ್ ತಲೆಮರೆಸಿಕೊಂಡ ವ್ಯಕ್ತಿ ಎಂಬ ಸಂಗತಿ ಪಾಪ! ಅವರಿಗೂ ತಿಳಿದಿರಲಿಕ್ಕಿಲ್ಲ. ಅವರ ಸುತ್ತಮುತ್ತ ವೀಕ್ಷಕರಾಗಿ ನಿಂತಿದ್ದ ಪೋಲೀಸರಿಗೂ ತಿಳಿದಿರಲಿಕ್ಕಿಲ್ಲ. ಖಾನರ ಭಾಷಣಕ್ಕೆ ಅವಕಾಶ ಮಾಡಿಕೊಡುವಾಗಲೂ ಖಾನರು ಪರಾರಿ ವ್ಯಕ್ತಿ ಎಂಬಂಶ ಗೊತ್ತಿರಲಿಕ್ಕಿಲ್ಲ! ಇರಲಿ.

ಆಗಸ್ಟ್ 14ರ ಡೆಕ್ಕನ್ ಹೆರಾಲ್ಡ್ ಪತ್ರಿಕೆ, ಪರಾರಿ ಖಾನರ ಸುದ್ದಿ ಪ್ರಕಟಿಸಿದೆ. ಬಡವರ ಮನೆ ಸುಟ್ಟು ಅನ್ಯಾಯ ಮಾಡುವ ಪೋಲೀಸರು ಎಫ್. ಎಂ. ಖಾನ್‌ರಂಥವರನ್ನು ಬಂಧಿಸಿ ಕೋರ್ಟಿನ ಮುಂದೆ ಹಾಜರಪಡಿಸುವ ಪರಾಕ್ರಮ ತೋರಿಸುವರೇ? ಕಾದುನೋಡೋಣ. ಪೋಲೀಸರು ತಮ್ಮ ಕರ್ತವ್ಯದಲ್ಲಿ ತಪ್ಪಿದರೆ, ತಲೆಮರೆಸಿಕೊಂಡ ಖಾನರನ್ನು ಹಿಡಿಯಲು ಜನರೇ ಮುಂದಾಗುವರೆ! ಇಂದಿರಾ ಪಕ್ಷದ ಆಡಳಿತೆಯಲ್ಲಿ ತಮ್ಮ ಪಕ್ಷದವರಿಗೊಂದು ನ್ಯಾಯ, ವಿರೋಧಿ ಪಕ್ಷ ಮತ್ತು ಜನರಿಗೊಂದು ನ್ಯಾಯವೆಂಬುದನ್ನು ಖಾನ್‌ಪ್ರಕರಣ ತೋರಿಸಿಕೊಡುತ್ತಿದೆ. ಇದನ್ನು ಜನರು ಗಮನಿಸಬೇಕು.

ಹಾಲಿನ ಬೆಲೆಯಲ್ಲಿ ಹೆಚ್ಚಳ

ಬೆಳೆ ಸಂರಕ್ಷಿಸಲು ಹೊಲದ ಸುತ್ತ ಬೇಲಿ ಹಾಕುತ್ತಾರೆ. ಬೇಲಿಯೇ ಹೊಲ ಮೇದರೆ ಗತಿಯೇನು? ಬೇಲಿ ಅನುಸರಿಸುವ ನೀತಿಯನ್ನೇ ಆಳುವ ಇಂದಿರಾ ಸರಕಾರ ಅನುಸರಿಸುತ್ತಿದೆ. ಗೋದಿ, ಅಕ್ಕಿ, ಜೋಳ, ಜನತಾ ಬಟ್ಟೆ, ಸಕ್ಕರೆ ಹಾಗೆಯೇ ಪಾಮೆಣ್ಣೆಗಳ ಬೆಲೆಗಳನ್ನು ಸರಕಾರವೇ ಹೆಚ್ಚಿಸುತ್ತ ಹೊರಟಿದೆ. ಒಂದೇ ವರ್ಷದಲ್ಲಿ ಎರಡುಸಲ ಪೆಟ್ರೋಲ್, ಚಿಮಿಣಿಎಣ್ಣೆ, ಡೀಜೈಲ್‌ಗಳ ಬೆಲೆಯನ್ನೂ ಏರಿಸಿದೆ.

ದೊಡ್ಡಕ್ಕನ ಚಾಳಿ ಮನೆಮಂದಿಗೆಲ್ಲ ಎಂಬ ಗಾದೆಯಂತೆ ದಿಲ್ಲಿಯ "ಅಮ್ಮ"ನೇ ಬೆಲೆಏರಿಸುತ್ತಿರುವಾಗ ಬೆಂಗಳೂರಿನ "ಮಗ" ಸುಮ್ಮನಿರಲಿಕ್ಕಾಗುತ್ತದೆಯೇ? ಡೈರಿ ಹಾಲಿನ ಬೆಲೆಯಲ್ಲಿ ಲೀಟರಿಗೆ 40 ಪೈಸೆ ಹೆಚ್ಚಳ ಮಾಡಲಾಯಿತು. ಒಂದೇ ವರ್ಷದಲ್ಲಿ ಇದು ಎರಡನೇ ಸಲ.

ಗ್ರಾಹಕರಿಗೆ ಸರಿಯಾಗಿ ಹಾಲು ಪೂರೈಸಲ್ಪಡುತ್ತಿಲ್ಲ. ಇಂಥದ್ದರಲ್ಲಿ ಹಾಲು ದುಬಾರಿ.

"ಹಸಿರು ಕ್ರಾಂತಿ" ಮುಗಿಸಿ, "ಬಿಳಿ ಕ್ರಾಂತಿ"ಗೆ ಹೊರಟಿರುವ ಕಾಂಗ್ರೆಸ್ (ಐ) ಸರಕಾರ ಮಕ್ಕಳಿಗೂ ಮುದುಕರಿಗೂ ಹಾಲಿನ ಹನಿ ಬಾಯಿಗೆ ಬೀಳದಂತೆ ಮಾಡುತ್ತಿದಲ್ಲಾ! ಡೈರಿ ಹಾಲಿನ ಬೆಲೆ ಹೆಚ್ಚಿಸುವ ನೀತಿ ಖಂಡನೀಯ. ಸರಕಾರಿ ರಂಗದ ದುರಾಡಳಿತೆಯ ಪ್ರತೀಕವಿದು. 40 ಪೈಸೆಯಲ್ಲಿ ಬರೇ 5 ಪೈಸೆಯಷ್ಟೇ ಹಾಲಿನ ಸಹಕಾರಿ ಸಂಘಗಳಿಗೆ ಕೊಡುತ್ತಿರುವುದರಿಂದ ಡೈರಿಗೆ ಹಾಲು ಪೂರೈಸಲು ಅವರು ನಿರಾಕರಿಸುತ್ತಿರುವುದರಲ್ಲಿ ಅರ್ಥವಿದೆ. ಎಮ್ಮೆಗಳಿಗೆ ತಿನ್ನಿಸುವ ಮೇವು, ಹಿಂಡಿಯ ಬೆಲೆ ಹೆಚ್ಚಾಗುತ್ತಿರುವಾಗ, ಎಮ್ಮೆ ಕೊಂಡುಕೊಳ್ಳುವ ಧಾರಣೆ ಜಾಸ್ತಿಯಾಗುತ್ತಿರುವಾಗ ಹಾಲಿಗೂ ಬೆಲೆ ಹೆಚ್ಚಳವಾಗಬೇಕೆಂದು ಕೇಳುವಲ್ಲಿ ಅರ್ಥವಿದೆ. ಇವಕ್ಕೆ ಉಪಾಯವೂ ಇದೆ.

ಪೆಟ್ರೋಲ್, ಡೀಜೈಲ್ ಬೆಲೆಯನ್ನು ಕೇಂದ್ರ ಸರಕಾರ ಇತ್ತೀಚೆಗೆ ಹೆಚ್ಚಿಸಿದಾಗ ಇಂದಿರಾ ಕಾಂಗ್ರೆಸ್ ಆಳುವ ರಾಜ್ಯಗಳಲ್ಲೆಲ್ಲ ಜನರ ಪ್ರಯಾಣ ತುಟ್ಟಿಯಾಗಿದೆ. ಆದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಾರ್ಟಿಯ ಮುಖಂಡತ್ವದಲ್ಲಿರುವ ಪ. ಬಂಗಾಲ ಸರಕಾರ ಮೋಟರ್ ಚಾಲಕರಿಗೆ ಡೀಜೈಲ್, ಪೆಟ್ರೋಲಿಗೆ ಸಬ್ಸಿಡಿ ಕೊಟ್ಟು ನಾಗರಿಕರ ಪ್ರಯಾಣದ ಮೇಲೆ ಭಾರಬೀಳದಂತೆ ಮಾಡಿದೆ. ಗುಂಡೂರಾವ್ ಸರಕಾರ ಹಾಗೆ ಮಾಡದೆ ತನ್ನ ದುರಾಡಳಿತೆಯಿಂದಾಗಿ ಹಾನಿ ತುಂಬಿಕೊಳ್ಳಲು ಗ್ರಾಹಕರ ಮೇಲೆ ಹೆಚ್ಚುಭಾರ ಹಾಕಿ, ಹಾಲು ಸೊಸೈಟಿಗಳಿಗೂ ಅನ್ಯಾಯ ಮಾಡುತ್ತಿದೆ. ಎಲ್ಲ ಕಾರ್ಮಿಕ ಸಂಘಗಳೂ, ವಿರೋಧಿ ಪಕ್ಷದವರೂ ಸಾರ್ವಜನಿಕರೂ ಇಂಥ ಅವ್ಯವಹಾರ, ಸುಲಿಗೆಯ ವಿರುದ್ಧ ಹೋರಾಡಲು ಮುಂದೆ ಬರಬೇಕು.

ಮಂತ್ರಿ ಜಕನೂರ ಉವಾಚ

ತಮ್ಮ ಸರಕಾರ ಕನಿಷ್ಠ ಕೂಲಿ ಹೆಚ್ಚಿಸುವುದಾಗಿಯೂ, ತುಟ್ಟಿಭತ್ತೆಯನ್ನು ಕನಿಷ್ಠ ಕೂಲಿಗೆ ಜೋಡಿಸುವುದಾಗಿಯೂ, ಕನಿಷ್ಠ ಕೂಲಿ ಪಡೆಯುವವರಿಗೆ ಕೃಷಿ ಕೂಲಿಗಾರರಿಗೆ ತುಟ್ಟಿಭತ್ತೆ ಸಿಗುವಂತೆ ಮಾಡಿರುವುದು ಕರ್ನಾಟಕ ರಾಜ್ಯದಲ್ಲೇ ಪ್ರಥಮ ಹೆಜ್ಜೆ ಎಂದೂ ಹೇಳಿದ್ದಾರೆ. ಮಂತ್ರಿ ಜಕನೂರ ಅವರು ಅಪ್ಪಟ ಸುಳ್ಳು ಮಾತಾಡುತ್ತಿದ್ದಾರೆ.

ನಮ್ಮ ರಾಜ್ಯದಲ್ಲಿ ಕನಿಷ್ಟ ಕೂಲಿ ಕಾಯಿದೆ ಜಾರಿಯಲ್ಲಿದ್ದರೂ, ಅದರ ಲಾಭ ದುಡಿಯುವವರಿಗೆ ಸಿಗುತ್ತಿಲ್ಲ. ಎರಡನೆಯದಾಗಿ ಕನಿಷ್ಠ ಕೂಲಿಗೆ ತುಟ್ಟಿಭತ್ತೆ ಜೋಡಿಸುವ ಕ್ರಮ ಕೈಗೊಂಡಿರುವ ರಾಜ್ಯ ಕರ್ನಾಟಕ ಪ್ರಥಮವಲ್ಲ. ಪ. ಬಂಗಾಳ ಮತ್ತು ಕೇರಳ ಸರಕಾರಗಳು ಕರ್ನಾಟಕಕ್ಕಿಂತಲೂ ಹೆಚ್ಚು ಕನಿಷ್ಠ ವೇತನ ನೀಡುತ್ತಿವೆ. ಅದರ ಲಾಭ ದುಡಿಯುವವರಿಗೆ ಸಿಗುತ್ತಿದೆ. ಇಷ್ಟೇ ಅಲ್ಲದೆ ಕೇರಳ ರಾಜ್ಯದಲ್ಲಿ ಈಗಾಗಲೇ ಕನಿಷ್ಠ ವೇತನದ ಜೊತೆಯಲ್ಲೇ ತುಟ್ಟಿಭತ್ತೆಯನ್ನೂ ಜೋಡಿಸಲಾಗಿದೆ. ಪಾಪ ಮಂತ್ರಿ ಜಕನೂರರವರಿಗೆ ಈ ವಿಷಯ ತಿಳಿದಿರಲಿಕ್ಕಿಲ್ಲ. ತಿಳಿದಿದ್ದರೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿರುವ ಸರಕಾರ ಕೈಗೊಂಡ ಜನಪ್ರಿಯ ಕಾನೂನುಗಳನ್ನು ಬೆಳಕಿಗೆ ತರುವುದು, ಪ್ರಚಾರ ಮಾಡುವುದು ತನ್ನ ಪಕ್ಷದ ಆಡಳಿತೆಗೆ ಕಳಂಕವಲ್ಲವೇ?

ಪರೀಕ್ಷಾ ಕೇಂದ್ರಗಳಲ್ಲಿ ಪ್ರತಿಬಂಧಕಾಜ್ಞೆ

ರಾಜ್ಯದ ಪರೀಕ್ಷಾ ಕೇಂದ್ರಗಳನ್ನು "ಪ್ರವೇಶವಿಲ್ಲದ" ಪ್ರದೇಶಗಳನ್ನಾಗಿ ಸಾರಲಾಗುವುದೆಂಬ ನಿರ್ಣಯವನ್ನು ವೈಸ್‌ಚಾನ್ಸಲರರ ಮತ್ತು ಉಚ್ಚ ಮಟ್ಟದ ಪೋಲೀಸ್ ಅಧಿಕಾರಿಗಳ ಸಭೆಯಲ್ಲಿ ನಿರ್ಣಯಿಸಲಾಯಿತೆಂದೂ, ಇದಕ್ಕೆ ಸಂಬಂಧಪಟ್ಟಂತೆ ಕಾನೂನಿನಲ್ಲಿ ತಿದ್ದುಪಡಿಮಾಡಲಾಗುವುದೆಂದೂ ಶಿಕ್ಷಣ ಮಂತ್ರಿ ಶಂಕರರಾವ್ ಅವರು ಧಾರವಾಡದಲ್ಲಿ ಜಾಹೀರಪಡಿಸಿದರು. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ನಕಲು ಮಾಡುವುದನ್ನು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗುವುದಂತೆ.

ಬೆಂಗಳೂರು ನಗರದಲ್ಲಿ ಕಾರ್ಮಿಕರ ಹೋರಾಟ ನಡೆಯುತ್ತಿದ್ದಾಗ ಹಲವಾರು ತಿಂಗಳು ಪ್ರತಿಬಂಧಕಾಜ್ಞೆ ಹೇರಲಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಒಂದಲ್ಲೊಂದು ಕಡೆ ಪ್ರತಿಬಂಧಕಾಜ್ಞೆ ಇಲ್ಲದ ದಿನಗಳಿಲ್ಲ. ಜನರ ಹೋರಾಟಗಳನ್ನು ಹತ್ತಿಕ್ಕಲು ಪೋಲೀಸ್ ಕಾಯಿದೆ ನಿರಂತರ ಉಪಯೋಗ ಮಾಡಲಾಗುತ್ತಿದೆ. ಈಗ ಪರೀಕ್ಷಾ ಕೇಂದ್ರಗಳಲ್ಲೂ ಈ ಕ್ರಮವೇ?

ಕರ್ನಾಟಕ ರಾಜ್ಯದಂತೆಯೇ ದೇಶದ ಇತರ ಪ್ರಾಂತ್ಯಗಳಲ್ಲೂ ಪ. ಬಂಗಾಳದಲ್ಲೂ ಕಾಂಗ್ರೆಸ್ ಆಡಳಿತೆ ಇರುವಾಗ ನಕಲುಮಾಡುವುದು, ಪರೀಕ್ಷೆಗಳನ್ನು ಮುಂದೆ ಹಾಕುವುದೆಲ್ಲ ನಡೆದೇ ಇತ್ತು. ಪ. ಬಂಗಾಲದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಡರಂಗದ ಸರಕಾರ ಅಧಿಕಾರಕ್ಕೆ ಬಂದ ನಂತರ ಶಿಕ್ಷಣ ರಂಗದಲ್ಲಿ ಇಂಥ ಅನಿಷ್ಟಗಳು ನಡೆಯುತ್ತಿಲ್ಲ. ಶಂಕರರಾವ್ ಹೇಳುವಂತೆ ಪ್ರತಿಬಂಧಕಾಜ್ಞೆಗಳ ಮೂಲಕ ಅವು ನಿಲ್ಲಿಸಲ್ಪಟ್ಟಿಲ್ಲ. ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯನ್ನುಂಟುಮಾಡಿ, ಆಡಳಿತೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಮಾಡಿ, ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸಮರ್ಪಕವಾದ ಪರಿಹಾರಗಳನ್ನೊದಗಿಸಿ, ನಕಲು ಮಾಡುವ, ಗಲಾಟೆಮಾಡುವ ಪ್ರವೃತ್ತಿಯನ್ನು ನಿಲ್ಲಿಸಲಾಗಿದೆ.

ಶಂಕರರಾಯರು ಪ್ರತಿಬಂಧಕಾಜ್ಞೆಗಳ ಮೂಲಕವೇ ರಾಜ್ಯವಾಳುವುದನ್ನೂ, ಪರೀಕ್ಷೆಗಳನ್ನು ನಡೆಸುವುದನ್ನೂ ಬಿಟ್ಟುಕೊಟ್ಟು, ಪ. ಬಂಗಾಲ ಸರಕಾರ ಅನುಸರಿಸುತ್ತಿರುವ ಕ್ರಮಗಳನ್ನು ಅಭ್ಯಾಸ ಮಾಡಿ, ನಮ್ಮ ರಾಜ್ಯದಲ್ಲೂ ಅದನ್ನು ಅನುಕರಣೆ ಮಾಡಿದರೆ ಪರೀಕ್ಷಾ ಕೇಂದ್ರಗಳಲ್ಲಿ ಪ್ರತಿಬಂಧಕಾಜ್ಞೆ ವಿಧಿಸುವ ಅಗತ್ಯವಿಲ್ಲೆಂದು ನಮ್ಮ ಅನಿಸಿಕೆ. ಶಿಕ್ಷಣ ಮಂತ್ರಿ ಶಂಕರರಾವರಿಗೂ, ವಿಶ್ವವಿದ್ಯಾಲಯಗಳ, ಪೋಲೀಸ್ ಖಾತೆಯ ಅಧಿಕಾರಿಗಳಿಗೂ ಇದು ಅರ್ಥವಾಗಬೇಕಲ್ಲ! ಅವರಿಗೆಲ್ಲ ಅರ್ಥವಾಗದಿದ್ದರೆ, ಅದು ಅರ್ಥ ಆಗುವಂತೆ ಮಾಡುವುದು ವಿದ್ಯಾರ್ಥಿಗಳ-ಪಾಲಕರ ಕರ್ತವ್ಯ!

ಮತಾಂತರದ ಬೊಬ್ಬಾಟೆ

ಹಲವು ವರ್ಷಗಳ ಹಿಂದೆ ಹರಿಜನರು ಮತ್ತು ಇತರ ಜಾತಿಯವರು ಕ್ರೈಸ್ತ ಧರ್ಮ ಸ್ವೀಕರಿಸುವ ಪಿಡುಗು ಬಹಳ ಇತ್ತು. ಕ್ರಿಶ್ಚನ್ ಧರ್ಮ ಸ್ವೀಕರಿಸಿದರೆ ಸಮಾಜದಲ್ಲಿ ಮತ್ತು ಆ ಜಾತಿಯಲ್ಲಿ ಹೆಚ್ಚಿನ ಸೌಲಭ್ಯಗಳು ಸಿಗುತ್ತವೆಂಬ ಭ್ರಾಂತಿಯಿಂದ ಮತಾಂತರ ನಡೆಯುತ್ತಿತ್ತು. ಇತ್ತೀಚೆಗೆ ಅದು ಚಾಲ್ತಿಯೊಳಗಿಲ್ಲ. ತ್ರಿಪುರಾ-ಅಸ್ಸಾಂ ಮುಂತಾದ ಕೆಲವೆಡೆ ಅಮೆರಿಕ-ಜರ್ಮನಿಯ ಕ್ರಿಶ್ಚನ್ ಮಿಷನರಿಗಳು ಬಹಳಷ್ಟು ಹಣ ಖರ್ಚುಮಾಡಿ, ಗುಡ್ಡಗಾಡು ಪ್ರದೇಶದ ಜನರಲ್ಲಿ ಗೊಂದಲ ಉಂಟುಮಾಡುತ್ತಿದ್ದಾರೆ. ಎಡಪಂಥದ ವಿರುದ್ಧ ರಾಜಕೀಯ ಪ್ರಚಾರವನ್ನೂ ಮಾಡುತ್ತಿದ್ದಾರೆ.

ಈಗ ತಮಿಳುನಾಡಿನಲ್ಲಿ ಹರಿಜನರು ಇಸ್ಲಾಂ ಧರ್ಮ ಸ್ವೀಕರಿಸುವ ಹೊಸ ಸಮಸ್ಯೆ ಉಂಟಾಗಿದೆ. ಬೆಂಗಳೂರಿಗೂ ಆ ಗಾಳಿ ಬೀಸಿದೆ. ಸೌದೀ ಅರೇಬಿಯದ ಹಣದ ಆಸೆ-ಆಮಿಷ ತೋರಿಸಿ ಈ ಮತಾಂತರ ನಡೆಯುತ್ತಿದೆಂಬ ಬೊಬ್ಬಾಟವಿದೆ. ಹಿಂದೂಗಳು ಹರಿಜನರ ಮೇಲೆ ನಡೆಸುತ್ತಿರುವ ಅತ್ಯಾಚಾರದಿಂದ ರೇಗಿ, ಬೇಸತ್ತು ಅವರು ಇಸ್ಲಾಂ ಧರ್ಮ ಸ್ವೀಕರಿಸುತ್ತಿದ್ದಾರೆಂಬ ಪ್ರಚಾರವೂ ಕೇಳಿಬರುತ್ತಿದೆ.

ಪೇಜಾವರ ಮತ್ತಿತರ ಮಠಾಧಿಪತಿಗಳೂ, ಆರ್. ಎಸ್. ಎಸ್., ಹಿಂದೂ ಮಹಾಸಭಾದವರೂ ಮುಸ್ಲಿಂ ಧರ್ಮ ಸ್ವೀಕರಿಸಬಾರದೆಂದು ಹರಿಜನರಲ್ಲಿ ಪ್ರಚಾರ ಮಾಡುತ್ತಿರುವುದನ್ನೂ ನೋಡುತ್ತಿದ್ದೇವೆ. ಆದರೆ ಈ ರೀತಿ ಪ್ರಚಾರ ಮಾಡುವ ಕಟ್ಟಾ ಹಿಂದು ಧರ್ಮಿಯರು ಹರಿಜನರನ್ನು ಉಡುಪಿ ದೇವಸ್ಥಾನ, ಧರ್ಮಸ್ಥಳ, ಮತ್ತಿನ್ನಿತರ ಧಾರ್ಮಿಕ ಸ್ಥಳಗಳಿಗೆ ಪ್ರವೇಶ ಕೊಡಿಸುವುದಿಲ್ಲವಷ್ಟೇ ಅಲ್ಲ ಬ್ರಾಹ್ಮಣರನ್ನು ಬಿಡಿ ಇತರ ಜಾತಿಯವರ ಜೊತೆಯಲ್ಲಿ ಊಟ ನೀಡುವುದಿಲ್ಲೆಂಬುದನ್ನು ಗಮನಿಸಬೇಕು.

ಬರೇ ಸಹಭೋಜನ, ಅಂತರ್ಜಾತಿ ಮದುವೆಗಳಿಂದಲೇ ಹರಿಜನರ ಸಮಸ್ಯೆ ಬಗೆಹರಿಯಲಾರದು. ಆರ್ಥಿಕ ಸಾಮಾಜಿಕ ಬದಲಾವಣೆಯಾಗಬೇಕು. ಆರ್ಥಿಕ ಬದಲಾವಣೆಯಾದರೆ ಸಾಮಾಜಿಕ ಬದಲಾವಣೆಯೂ ಆಗುತ್ತದೆ. ಅದಕ್ಕೆ ಕಾರ್ಮಿಕವರ್ಗದ ಮುಖಂಡತ್ವದಲ್ಲಿ ರಾಜಕೀಯ ಕ್ರಾಂತಿಯಾಗಿ, ಗುತ್ತೇದಾರಿ ಬಂಡವಾಳ ಪದ್ಧತಿ, ಭೂಮಾಲಕತ್ವ ಪದ್ಧತಿಯಲ್ಲಿ ಮೂಲಭೂತ ಬದಲಾವಣೆಯಾಗಲೇಬೇಕು. ಅದಕ್ಕಿಂತ ಮುಂಚೆ ತಾತ್ಪೂರ್ತಿಕ ಪರಿಹಾರವಾದರೂ ಸಿಗಬೇಕಾದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದಲ್ಲಿ ಎಡರಂಗ ಸರಕಾರವಾದರೂ ಸ್ಥಾಪನೆಯಾಗಬೇಕು. ಆಗ ಸೌದಿ ಅರೇಬಿಯದ ಹಣದ ಪ್ರಭಾವವಾಗಲೀ, ಹಿಂದು ಮತಸ್ಥರ ದಬ್ಬಾಳಿಕೆಯಾಗಲೀ ಹರಿಜನ-ಗಿರಿಜನರ ಮೇಲೆ ನಡೆಯಲಿಕ್ಕೆ ಸಾಧ್ಯವಿಲ್ಲ. ಮತಾಂತರದ ಸಮಸ್ಯೆಯೂ ಉಂಟಾಗುವುದಿಲ್ಲ.

ಮನುಷ್ಯನ ನಡೆ, ನುಡಿ, ಆಚಾರ, ವಿಚಾರಗಳಲ್ಲಿ ಬದಲಾವಣೆ ತರುವ ಆರ್ಥಿಕ-ಸಾಮಾಜಿಕ ಸಂಬಂಧ ಇರುವ ಸಮಾಜ ಕಟ್ಟುವುದು ಅಗತ್ಯ. ಅದಕ್ಕೆ ಬಲಿಷ್ಠವಾದ ಕಮ್ಯುನಿಸ್ಟ್ ಪಾರ್ಟಿ (ಮಾರ್ಕ್ಸಿಸ್ಟ್) ಮತ್ತು ರೈತ-ಕಾರ್ಮಿಕ ಸಂಘಗಳು ಬೆಳೆಯಬೇಕು, ಸಮಾಜದ ಆಗು-ಹೋಗುಗಳಲ್ಲಿ ಪ್ರಧಾನ ಪಾತ್ರವಹಿಸಬೇಕು. ●

ಪ್ಯಾಲೆಸ್ಟೈನಿಯನ್ನರ ಹೋರಾಟ-ಚಾರಿತ್ರಿಕ ಹಿನ್ನೋಟ

ಅರಬ್-ಇಸ್ರೇಲಿ ಘರ್ಷಣೆಯ ಮೂಲದಲ್ಲಿ ಪ್ಯಾಲೆಸ್ಟೈನಿಯನ್ ಸಮಸ್ಯೆಯಿದೆ. ಮಧ್ಯಪ್ರಾಚ್ಯದ ಪ್ರಸ್ತುತ ಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬೇಕು. ಈ ಪ್ರದೇಶವು ವಿವಿಧ ಸಂಸ್ಕೃತಿಗಳ ಸಂಗಮ ಸ್ಥಳವಾಗಿದೆ. ಮತ್ತು ದೂರಪ್ರಾಚ್ಯ ಹಾಗೂ ಪಾಶ್ಚಿಮಾತ್ಯ ಪ್ರಪಂಚಗಳ ನಾಗರೀಕತೆಯ ಕವಲುದಾರಿಯಲ್ಲಿದ್ದು ತೀವ್ರ ಘರ್ಷಣೆಯ ನೆಲೆಯಾಗಿವೆ. ಈ ಸಮಸ್ಯೆಯನ್ನು ಸಾಮಾನ್ಯವಾಗಿ ಧಾರ್ಮಿಕ ಅಥವಾ ಜನಾಂಗೀಯ ಸಮಸ್ಯೆಯೆಂದು ಸರಳೀಕರಿಸಲು ಪ್ರಯತ್ನಿಸುತ್ತಾರೆ. ಆದರೆ ವಾಸ್ತವದಲ್ಲಿ ಅರಬ್‌ರಾಷ್ಟ್ರಗಳ ಇಂಧನ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವ ಗುರಿಯಿರುವ ಸಾಮ್ರಾಜ್ಯಶಾಹಿ ಶಕ್ತಿಗಳ ಆಸಕ್ತಿಯ ಕೇಂದ್ರವಾಗಿದೆ.

ಝಿಯೋನಿಸ್ಟ ಚಳುವಳಿಯ ಯಹೂದ್ಯ ವಲಸೆಗಾರರು ಬಲವಂತವಾಗಿ ಪ್ಯಾಲೆಸ್ಟೈನಿಯನ್ ಪ್ರದೇಶವನ್ನು ಆಕ್ರಮಿಸಿದಾಗಿನಿಂದ ಈ ಅರಬ್-ಇಸ್ರೇಲ್ ಸಮಸ್ಯೆ ತಲೆದೋರಿದೆ. ಈ ಪ್ರದೇಶದಲ್ಲಿ ಶತಮಾನಗಳಿಂದ ಅರಬ್ ಜನತೆ ವಾಸಮಾಡುತ್ತಿದೆ.

ಜನಾಂಗೀಯ ಮತ್ತು ಪ್ರತೀಗಾಮಿ

ಝಿಯೋನಿಸ್ಟರ ಈ 'ಮರಳಿ ಮಾತೃಭೂಮಿಗೆ' ಚಳುವಳಿಯು ಮೊದಲಿನಿಂದಲೂ ಜನಾಂಗೀಯ ಮತ್ತು ಪ್ರತಿಗಾಮಿ ಧೋರಣೆಯುಳ್ಳದ್ದಾಗಿದೆ. ಇದರ ನಾಯಕರುಗಳು ವಾಣಿಜ್ಯ ಪ್ರಪಂಚದ ಪ್ರತಿನಿಧಿಗಳಾಗಿದ್ದು ಬ್ರಿಟಿಷ್ ವಸಾಹತುಶಾಹಿಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಇವರುಗಳು ಸಾಮ್ರಾಜ್ಯಶಾಹಿಗಳ ಏಜೆಂಟರಾಗಿದ್ದು ಮಧ್ಯಪ್ರಾಚ್ಯದಲ್ಲಿ ಅದರ ಹಿತಾಸಕ್ತಿಗಳಿಗೆ ಅನುಗುಣವಾಗಿ ವರ್ತಿಸುತ್ತಿದ್ದಾರೆ. ಭಯೋತ್ಪಾದಕ ಚಟುವಟಿಕೆಗಳ ಮೂಲಕ ಮೂಲನಿವಾಸಿಗಳನ್ನು ವ್ಯವಸ್ಥಿತವಾಗಿ ಹೊರತಳ್ಳುತ್ತಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಝಿಯೋನಿಸ್ಟ ಚಳುವಳಿಯು ಹಣಕ್ಕಾಗಿ ಬಾಯಿ ಬಿಡುವ ಸಾಮ್ರಾಜ್ಯಶಾಹಿಗಳ ನೂತನ ದಂಡಯಾತ್ರೆಯಾಗಿದೆ.

ಪ್ರಪಂಚದಾದ್ಯಂತ ಹರಡಿರುವ ಯಹೂದ್ಯರಲ್ಲಿ ಕೆಲವರು ಮಾತ್ರ ಈ ಚಳುವಳಿಯಲ್ಲಿ ಭಾಗಿಗಳಾಗಿದ್ದಾರೆ. ಇವರುಗಳು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಮತ್ತು ಪಶ್ಚಿಮದ ಯಹೂದ್ಯ ಬಂಡವಾಳಿಗರ ನೆರವಿನಿಂದ ದ್ವಿತೀಯ ಮಹಾಯುದ್ಧಕ್ಕಿಂತ ಮೊದಲೇ ಪ್ಯಾಲೆಸ್ಟೈನ್‌ನಲ್ಲಿ ಯಹೂದ್ಯರ ಅನೇಕ ವಸತಿ ಪ್ರದೇಶಗಳನ್ನು ಸ್ಥಾಪಿಸಿದರು.

19ನೇ ಶತಮಾನದ ಕೊನೆಯಲ್ಲಿ ಪ್ಯಾಲೆಸ್ಟೈನ್ ಒಟ್ಟೊಮನ್ ಸಾಮ್ರಾಜ್ಯದ ಒಂದು ಕಾಲನಿಯಾಗಿತ್ತು. ಮೊದಲನೆ ಮಹಾಯುದ್ಧದಲ್ಲಿ ಬ್ರಿಟಿಷರು ಇದನ್ನು ವಶಪಡಿಸಿಕೊಂಡರು. ಇದರ ಮೇಲಿನ ಅಧಿಕಾರ ಲೀಗ್ ಆಫ್ ನೇಶನ್ಸ್ ಆಜ್ಞೆಯೊಂದಿಗೆ ಮಾನ್ಯತೆ ಪಡೆಯಿತು. ಪ್ಯಾಲೆಸ್ಟೈನ್‌ನ ಸ್ವಾತಂತ್ರ್ಯದ ಹಕ್ಕು ಈ ಆಜ್ಞೆಯಲ್ಲಿ ಅಡಕಗೊಂಡಿದೆ.

ಬ್ರಿಟಿಷರ ಪ್ರಭುತ್ವದಡಿಯಲ್ಲಿ

ಪ್ಯಾಲೆಸ್ಟೈನ್‌ನ ಆಡಳಿತವನ್ನು ಬ್ರಿಟಿಷರು ವಹಿಸಿಕೊಂಡಾಗ ಝಿಯೋನಿಸ್ಟ ಚಳುವಳಿಯೊಂದಿಗೆ ಅವರ ಬೇಡಿಕೆಯಾದ ಸ್ವತಂತ್ರ ದೇಶದ ಸ್ಥಾಪನೆಗೆ ಸಹಕರಿಸುವ ಒಪ್ಪಂದ ಮಾಡಿಕೊಂಡಿದ್ದರು. ಆದರೆ ಇಂತಹ ಪ್ರಯತ್ನವು ಈಗಾಗಲೇ ಪ್ಯಾಲೆಸ್ಟೈನ್‌ನಲ್ಲಿ ವಾಸಿಸುತ್ತಿರುವ ಯಹೂದ್ಯರಲ್ಲದವರ ಧಾರ್ಮಿಕ ಮತ್ತು ನಾಗರೀಕ ಹಕ್ಕುಗಳನ್ನು ನಿರ್ಲಕ್ಷಿಸಬಾರದೆಂಬ ಅಂಶವು ಒಪ್ಪಂದದಲ್ಲಿ ಒಳಗೊಂಡಿತ್ತು.

ಝಿಯೋನಿಸ್ಟರು ಯಾವ ಪ್ರಮಾಣದ ದೇಶವನ್ನು ಸ್ಥಾಪಿಸಲು ಯೋಜಿಸಿದ್ದರು? ಪ್ಯಾಲೆಸ್ಟೈನ್‌ನಲ್ಲಿ ಬ್ರಿಟಿಷರು ಅಧಿಕಾರ ಹೊಂದಿದ್ದ ಪ್ರದೇಶಕ್ಕಿಂತಲೂ ದೊಡ್ಡ ಪ್ರದೇಶ ಅವರ ಕಲ್ಪನೆಯಲ್ಲಿತ್ತು. ಇದು ಲೆಬನಾನಿನ ಲಿಟಾನಿ ನದಿಯವರೆಗೆ ಚಾಚಿದ್ದಲ್ಲದೆ ಸಿರಿಯಾ, ಟ್ರಾನ್ಸ್ ಜೋರ್ಡಾನ್ ಮತ್ತು ಈಜಿಪ್ಟಿನ ಕೆಲವು ಭಾಗಗಳನ್ನು ಒಳಗೊಂಡಿತ್ತು.

ಬ್ರಿಟಿಷರಿಗೆ ಪ್ಯಾಲೆಸ್ಟೈನ್‌ನ ಮೇಲೆ 1923ರಲ್ಲಿ ಅಧಿಕಾರ ದೊರೆತು 1947ರವರೆಗೆ ಮುಂದುವರಿಯಿತು. ಈ ಸಮಯದಲ್ಲೇ ಯಹೂದ್ಯರು ಪ್ರಮುಖವಾಗಿ ಯೂರೋಪಿನಿಂದ ದೊಡ್ಡ ಪ್ರಮಾಣದಲ್ಲಿ ವಲಸೆಬಂದರು. ಎರಡನೆ ಜಾಗತಿಕ ಯುದ್ಧದ ಸಮಯದಲ್ಲಿ ನಾಝಿಗಳ ಕ್ರೌರ್ಯಕ್ಕೆ ಒಳಗಾದ ಯಹೂದ್ಯರ ವಲಸೆ ತೀವ್ರಗೊಂಡಿತು. 1922 ರಿಂದ 1946ರರೊಳಗೆ ಪ್ಯಾಲೆಸ್ಟೈನ್‌ನ ಜನಸಂಖ್ಯೆ ಶೇಕಡ 250ರಷ್ಟು ಹೆಚ್ಚಿತು. ಅಂದರೆ 750,000 ದಿಂದ 1,850,000ಕ್ಕೆ ಏರಿತು.

ಇದೇ ಸಮಯದಲ್ಲಿ ಪ್ಯಾಲೆಸ್ಟೈನ್‌ನಲ್ಲಿ ಯಹೂದ್ಯರ ಸಂಖ್ಯೆ 56000 ದಿಂದ 608000ಕ್ಕೆ ಏರಿತು. ಇವರಲ್ಲಿ ಕ್ರಮವಾಗಿ ವಲಸೆ ಬಂದವರು 375000 ಜನರಾದರೆ ಅಕ್ರಮವಾಗಿ ಬಂದವರ ಸಂಖ್ಯೆ 65000. ಹೀಗಾಗಿ ಬ್ರಿಟನ್‌ನ ರಕ್ಷಣೆಯಡಿಯಲ್ಲಿ ವಲಸೆ ಬಂದವರ ಸಂಖ್ಯೆ 5 ಲಕ್ಷ ಮುಟ್ಟಿತು. ವಲಸೆ ಬಂದವರು ಪ್ರಮುಖವಾಗಿ ಜೆರೂಸಲೆಂ, ಜಿಫಾ, ಟೆಲ್ ಅವೀವ್ ಮತ್ತು ಹೈಫೆಗಳಲ್ಲಿ ನೆಲೆಸಿದರು.

ಪ್ಯಾಲೆಸ್ಟೈನ್‌ನಲ್ಲಿ ಯಹೂದ್ಯರ ಸಂಖ್ಯೆ ಮಾತ್ರ ಬೆಳೆಯುದಲ್ಲದೆ 1946ರ ಹೊತ್ತಿಗೆ ಇದೇ ಪ್ರದೇಶದ ಶೇಕಡ 6.2 ರಷ್ಟು ಮತ್ತು ಕೃಷಿಯೋಗ್ಯ ಭೂಮಿಯ ಶೇಕಡ 12 ರಷ್ಟು ವಿವಿಧ ಯಹೂದ್ಯ ಸಂಘಟನೆಗಳ ಹಿಡಿತದಲ್ಲಿ ಬಂದಿತು.

ಆಯಕಟ್ಟಿನ ಪ್ರಾಮುಖ್ಯತೆ

ದ್ವಿತೀಯ ಮಹಾಯುದ್ಧ ಕೊನೆಯ ಹೊತ್ತಿಗೆ ಸಾಮ್ರಾಜ್ಯಶಾಹಿಯು ಮಧ್ಯಪ್ರಾಚ್ಯದ ಆಯಕಟ್ಟಿನ ಮತ್ತು ಆರ್ಥಿಕ ಪ್ರಾಮುಖ್ಯತೆಯನ್ನು ಮನಗಂಡಿತು. ಆ ಹೊತ್ತಿಗೆ ಅಲ್ಲಿನ ಸಮೃದ್ಧ ತೈಲಸಂಪನ್ಮೂಲಗಳು ದೃಢಪಟ್ಟಿದ್ದವು. ಮಧ್ಯಪ್ರಾಚ್ಯದ ಭೌಗೋಳಿಕ ನೆಲೆ ಮತ್ತು ತೈಲ ಸಂಪತ್ತುಗಳಿಂದಾಗಿ ಸೋವಿಯೆತ್ ಒಕ್ಕೂಟದ ವಿರುದ್ಧದ ಹೋರಾಟದಲ್ಲಿ ಅದರ ಪ್ರಾಮುಖ್ಯತೆಯನ್ನೊಳಗೊಂಡಂತೆ ಫ್ಯಾಸಿಸ್ಟರ ಅವಸಾನಕ್ಕೂ ಮೊದಲೇ ಒಂದು ಷಡ್ಯಂತ್ರವನ್ನು ರೂಪಿಸಲಾಯಿತು. ಈ ಷಡ್ಯಂತ್ರದನ್ವಯ ಪ್ಯಾಲೆಸ್ಟೈನ್‌ನಲ್ಲಿ ಅಮೆರಿಕಾ, ಬ್ರಿಟನ್ ಮತ್ತಿತರ ದೇಶಗಳ ಬಾಲಬಡುಕ ಯಹೂದ್ಯ ರಾಷ್ಟ್ರವೊಂದರ ಅಸ್ತಿತ್ವ ತೀರ ಅಗತ್ಯವಾಗಿತ್ತು. ಈ ರಾಷ್ಟ್ರವನ್ನು ತಮ್ಮ ಆಸಕ್ತಿಗನುಗುಣವಾಗಿ ಬಳಸಲು ಸಾಮ್ರಾಜ್ಯಶಾಹಿ ದೇಶಗಳು ಯೋಚಿಸಿದವು.

ಬ್ರಿಟಿಷರು, ಈ ಪ್ರದೇಶದ ಹತೋಟಿಯಲ್ಲಿದ್ದಾಗ ಯಹೂದ್ಯ ಸಂಘಟನೆಗಳಿಗೆ ವಾಗ್ದಾನ ಮಾಡಿದಂತೆ ಯಹೂದ್ಯ ರಾಷ್ಟ್ರವೊಂದರ ನಿರ್ಮಾಣಕ್ಕೆ ಸಹಕಾರಿಯಾದ ಭೂಮಿಕೆಯನ್ನು ನಿರ್ಮಾಣ ಮಾಡಿದರು.

1945ರ ಮೇ ತಿಂಗಳಿನಲ್ಲಿ ಯಹೂದ್ಯರ ಸಂಘಟನೆ ಪ್ಯಾಲೆಸ್ಟೈನ್‌ನಲ್ಲಿ ಯಹೂದ್ಯ ರಾಷ್ಟ್ರವೊಂದರ ಸ್ಥಾಪನೆಗೆ ಅಧಿಕೃತವಾಗಿ ಬ್ರಿಟಿಷ್ ಸರ್ಕಾರದ ಮುಂದೆ ಬೇಡಿಕೆಯಿಟ್ಟಿದ್ದಾಗ, ವಾಸ್ತವದಲ್ಲಿ ಅಂತಹ ರಾಷ್ಟ್ರವೊಂದು ಅಸ್ತಿತ್ವದಲ್ಲಿತ್ತು. ಯಹೂದ್ಯ ಸಂಘಟನೆಗಳಿಗೆ ರಾಜ್ಯವೊಂದರ ಸ್ಥಾಪನೆಗೆ ಬೇಕಾದ ಎಲ್ಲ ಅಧಿಕಾರಗಳೂ ಇದ್ದವು; ಸ್ಥಳೀಯ ಸರ್ಕಾರ, ವಿಧಾನ ಮಂಡಲಗಳು ಇದ್ದುವಲ್ಲದೆ ಅದರ ಹಿಡಿತದಲ್ಲಿದ್ದ ಪ್ರದೇಶದ ಮೇಲೆ ಆಡಳಿತಾಧಿಕಾರವನ್ನೂ ಹೊಂದಿತ್ತು. ಮಿಲಿಟರಿ, ಅರೆ-ಮಿಲಿಟರಿ ದಳಗಳೂ ಇದ್ದವು. ಆ ಪ್ರದೇಶದಲ್ಲಿ ನೆಲೆಸಿದವರನ್ನು ಒಳಗೊಂಡಂತೆ 40,000 ಜನರ ಪ್ರಾದೇಶಿಕ ಮಿಲಿಟರಿ ಪಡೆ ಮತ್ತು ಪೋಲೀಸರನ್ನು ಒಳಗೊಂಡಂತೆ 16,000ಜನರ ಸೈನ್ಯ ಇದ್ದವು.

ಇದಲ್ಲದೆ ಭಯೋತ್ಪಾದನೆ ಚಟುವಟಿಕೆಗಳಿಗಾಗಿ ರಹಸ್ಯ ಸಂಘಟನೆಗಳಿದ್ದವು. (ಇಸ್ರೇಲಿನ ಈಗಿನ ಪ್ರಧಾನಿ ಬೆಗಿನ್ ಇಂತಹ ಸಂಘಟನೆಯೊಂದರ ಸದಸ್ಯರಾಗಿದ್ದರು) ಇಂತಹ ಸಂದರ್ಭದಲ್ಲಿ ಯಹೂದ್ಯ ಆಕ್ರಮಿತ ಪ್ರದೇಶದ ಮೇಲೆ ಬ್ರಿಟಿಷರ ಹಿಡಿತ ಕೇವಲ ಔಪಚಾರಿಕವಾಗಿತ್ತು.

ಪ್ಯಾಲೆಸ್ಟೈನ್‌ನ ವಿಭಜನೆ

ಝಿಯೋನಿಸ್ಟ ಭಯೋತ್ಪಾದಕ ಗುಂಪುಗಳ ಹಿಂಸಾತ್ಮಕ ಚಟುವಟಿಕೆಗಳು ಮತ್ತು ಪ್ಯಾಲೆಸ್ಟೈನ್ ಪ್ರದೇಶಕ್ಕೆ ಅಕ್ರಮ ವಲಸೆ ಬರುವವರ ಸಂಖ್ಯೆ ಹೆಚ್ಚಿದಾಗ ಬ್ರಿಟನ್‌ಗೆ ಪರಿಸ್ಥಿತಿಯನ್ನು ಹತೋಟಿಯಲ್ಲಿಡಲಾಗಲಿಲ್ಲ. ಈ ಸಮಸ್ಯೆಯನ್ನು ಬ್ರಿಟನ್ ಸಂಯುಕ್ತ ರಾಷ್ಟ್ರ ಸಂಘದ ಮುಂದೆ ತಂದಿತು. ಪ್ಯಾಲೆಸ್ಟೈನ್‌ನ ಮುಂದಿನ ಸರ್ಕಾರದ ಬಗ್ಗೆ ಸಲಹೆ ನೀಡಲು ಜನರಲ್ ಅಸೆಂಬ್ಲಿಯ ವಿಶೇಷ ಅಧಿವೇಶನವನ್ನು ಕರೆಯಲು ಪ್ರಾರ್ಥಿಸಲಾಯಿತು.

ಆಗತಾನೆ ಅಸ್ತಿತ್ವಕ್ಕೆ ಬಂದಿದ್ದ ಸಂಯುಕ್ತ ರಾಷ್ಟ್ರಸಂಘದ ಮುಂದೆ ಬಂದ ಈ ಚರ್ಚೆಯಲ್ಲಿ ನಾಝಿಗಳ ಕ್ರೌರ್ಯಕ್ಕೆ ಒಳಗಾದ ಯಹೂದ್ಯರ ಬಗೆಗೆ ಜಾಗತಿಕ ಅನುಕಂಪ ತೋರಲಾಯಿತು. ಅಲ್ಲದೆ ಯಹೂದ್ಯ ಸಂಘಟನೆಯು ಪಶ್ಚಿಮ ಯುರೋಪ್ ಅಮೆರಿಕಾ ಮುಂತಾದ ದೇಶಗಳೊಂದಿಗೆ ಹೊಂದಿದ್ದ ರಾಜತಾಂತ್ರಿಕ ಸಂಬಂಧಗಳು ಸಹಕಾರಿಯಾದವು.

ಸಂಯುಕ್ತ ರಾಷ್ಟ್ರಸಂಘವು ಈ ಪ್ರಶ್ನೆಗೆ ಸಂಬಂಧಿಸಿದಂತೆ ಹಲವಾರು ಪರಿಹಾರಗಳನ್ನು ಚರ್ಚಿಸಿ ಕೊನೆಗೆ ಪ್ಯಾಲೆಸ್ಟೈನನ್ನು ಅರಬ್ ಮತ್ತು ಯಹೂದ್ಯ ಪ್ರದೇಶಗಳನ್ನಾಗಿ ವಿಭಜಿಸಲು ನಿರ್ಧರಿಸಿತು. 1947ರಲ್ಲಿ ಜನರಲ್ ಅಸೆಂಬ್ಲಿಯು ಬಹುಮತದಿಂದ ಈ ನಿರ್ಣಯಕ್ಕೆ ಒಪ್ಪಿಗೆ ನೀಡಿತು. ಈ ಪ್ರದೇಶದಲ್ಲಿ ಶೇ. 56 ರಷ್ಟನ್ನು ಯಹೂದ್ಯರಿಗೂ 44 ರಷ್ಟನ್ನು ಅರಬರಿಗೂ ಹಂಚಲಾಯಿತು.

ಬ್ರಿಟಿಷರ ಕಾಲದಲ್ಲಿ ಪ್ರಾರಂಭಿಸಿದ್ದ ಮಿಲಿಟರಿ ಆಕ್ರಮಣವನ್ನು ಯಹೂದ್ಯರು ಮುಂದುವರಿಸಿದರು. 1948ರ ಏಪ್ರಿಲ್ ವೇಳೆಗೆ ಸುಮಾರು 5 ಲಕ್ಷ ಪ್ಯಾಲೆಸ್ಟೈನಿಯನ್ನರನ್ನು ಅವರ ಪ್ರದೇಶದಿಂದ ಹೊರದಬ್ಬಲಾಯಿತು. ಪ್ಯಾಲೆಸ್ಟೈನಿಯನ್ನರ ದುರಂತದ ಬದುಕು ಇದರೊಂದಿಗೆ ಪ್ರಾರಂಭವಾಯಿತು. ಇಂತಹ ಭಯೋತ್ಪಾದಕ ವಾತಾವರಣದಲ್ಲಿ ಇಸ್ರೇಲ್‌ನ ಸ್ವಾತಂತ್ರ್ಯವನ್ನು 14-5-1948ರಂದು ಘೋಷಿಸಲಾಯಿತು. ಮರುದಿನದ ಬ್ರಿಟಿಷ್ ಹೈಕಮಿಷನರ ನಿರ್ಗಮನದೊಂದಿಗೆ ಪ್ಯಾಲೆಸ್ಟೈನ್ ಮೇಲಿನ ಬ್ರಿಟಿಷರ ಅಧಿಕಾರವೂ ಕೊನೆಗೊಂಡಿತು. ಹೀಗೆ ಸಾಮ್ರಾಜ್ಯಶಾಹಿ ಷಡ್ಯಂತ್ರದ ಮೊದಲನೆ ಹಂತವು ಕೊನೆಗೊಂಡಿತು.

ಮೊದಲನೆ ಯುದ್ಧ

ವಿಭಜನೆಯ ತೀರ್ಪನ್ನು ಉಲ್ಲಂಘಿಸಿ ಪ್ಯಾಲೆಸ್ಟೈನ್‌ನ ಭೂಮಿಯನ್ನು ಯಹೂದ್ಯರು ಮಿಲಿಟರಿ ಬಲದೊಂದಿಗೆ ಆಕ್ರಮಿಸತೊಡಗಿದಾಗ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪರಾಭವಗೊಂಡಿದ್ದ ಅರಬ್‌ಲೀಗ್ ದೇಶಗಳು ಪ್ಯಾಲೆಸ್ಟೈನ್‌ನೊಳಗೆ ಖಾಯಂ ಸೇನೆಯನ್ನು ಕಳಿಸತೊಡಗಿದವು. ಇದು ಮಧ್ಯಪ್ರಾಚ್ಯದಲ್ಲಿ ಮೊದಲನೆ ಯುದ್ಧದಲ್ಲಿ ಕೊನೆಗೊಂಡಿತು.

ಝಿಯೋನಿಸ್ಟರ ಮಿಲಿಟರಿ ಶ್ರೇಷ್ಠತೆಯಿಂದಾಗಿ, ಪ್ಯಾಲೆಸ್ಟೈನ್ ಅರಬರ ಪರವಾಗಿ ಅರಬರಾಜ್ಯಗಳ ಮಿಲಿಟರಿ ಮಧ್ಯಪ್ರವೇಶ ಪರಿಣಾಮಕಾರಿಯಾಗಿರಲಿಲ್ಲ. ಕೆಲವೇ ವಾರಗಳಲ್ಲಿ ಗಾಜಾ ಸ್ಟ್ರಿಪ್ ಮತ್ತು ಜೋರ್ಡಾನ್ ನದಿಯ ಪಶ್ಚಿಮ ದಂಡೆಯನ್ನಾಳಿದ ಪ್ಯಾಲೆಸ್ಟೈನ್‌ನ ಬಹುಭಾಗವನ್ನು ಇಸ್ರೇಲ್ ಆಕ್ರಮಿಸಿಕೊಂಡಿತು. 1948ರ ಹೊತ್ತಿಗೆ ಯಹೂದ್ಯರು 'ಮಾತೃಭೂಮಿ' ಎಂದು ಹೇಳುತ್ತಿದ್ದ ಬಹುಭಾಗವನ್ನು ಇಸ್ರೇಲ್ ಆಕ್ರಮಿಸಿಕೊಂಡಿತು.

ಆದರೆ ಪ್ಯಾಲೆಸ್ಟೈನ್‌ನ ಅರಬ್ ಜನತೆ ತನ್ನ ಸ್ವಾತಂತ್ರ್ಯದ ಹಕ್ಕನ್ನು ಎಂದಿಗೂ ಬಿಟ್ಟುಕೊಟ್ಟಿಲ್ಲ. ಪ್ಯಾಲೆಸ್ಟೈನ್ ಬ್ರಿಟಿಷ್ ಆಳ್ವಿಕೆಯಲ್ಲಿದ್ದಾಗಲೂ ಅರಬರು ತಮ್ಮ ಹಕ್ಕುಗಳಿಗಾಗಿ ಹೋರಾಡಿದ್ದಾರೆ. ಅವರನ್ನು ಅವರ ಭೂಮಿಯಿಂದ ವಂಚಿಸುವವರ ವಿರುದ್ಧ ಬ್ರಿಟಿಷ್ ಸೈನ್ಯ, ಅಂಚೆಗಳ ವಿರುದ್ಧ ಧಾಳಿ ಮುಷ್ಕರ ನಡೆಸಿದ್ದಾರೆ. ಇವರ ಬಂಡಾಯವನು ದಮನಮಾಡಲು ಯಹೂದ್ಯ ಸಂಘಟನೆಗಳು ಬ್ರಿಟಿಷರ ಜೊತೆ ಪ್ರಮುಖ ಪಾತ್ರವಹಿಸಿದವು. ಅರಬ್ ಕ್ರಾಂತಿಕಾರಿಗಳ ಪ್ರಗತಿಗಾಮಿಗಳ ಚಳುವಳಿಯನ್ನು ಹತ್ತಿಕ್ಕಲು ಮತ್ತು ಸಾಮ್ರಾಜ್ಯಶಾಹಿಗಳ ಹಿಡಿತವನ್ನು ಈ ಪ್ರದೇಶದಲ್ಲಿ ಭದ್ರಗೊಳಿಸಲು ಈ ಸಂಘಟನೆಗಳು ದುಡಿಯುತ್ತಿವೆ.

ಪ್ರಮುಖ ಬದಲಾವಣೆಗಳು

1948 ಮತ್ತು 1968ರ ನಡುವೆ ಅರಬ್ ದೇಶಗಳಲ್ಲಿ ಮಹತ್ತರ ಬದಲಾವಣೆಗಳು ನಡೆದಿವೆ. ನಾಸೆರ್ ನೇತೃತ್ವದಲ್ಲಿ ರಾಷ್ಟ್ರೀಯ ಕ್ರಾಂತಿಗೆ ಈಜಿಪ್ಟ್‌ನಲ್ಲಿ ಜಯ ದೊರೆಯಿತು; ಸಿರಿಯಾದಲ್ಲಿ ಪ್ರಗತಿಪರ ಬಾತ್ ಪಕ್ಷದ ನೇತೃತ್ವದಲ್ಲಿ ಸರ್ಕಾರದ ಸ್ಥಾಪನೆ; 1968ರಲ್ಲಿ ಇರಾಕ್‌ನ ಕ್ರಾಂತಿಗೆ ಜಯ; ಆಲ್ಜೀರಿಯಾ ಮತ್ತು ಯೆಮನ್‌ನಲ್ಲಿ ಕ್ರಾಂತಿಕಾರಿ ವಿಮೋಚನಾ ಹೋರಾಟದ ಜಯದಿಂದಾಗಿ ಪುರೋಗಾಮಿ ಸರ್ಕಾರಗಳ ಸ್ಥಾಪನೆ. ಅಲ್ಲದೆ ವಸಾಹತು, ನವವಸಾಹತು ಪ್ರತಿಗಾಮಿ ಶಕ್ತಿಗಳ ವಿರುದ್ಧ ಅರಬ್ ಜನತೆಯ ಸ್ವಾತಂತ್ರ್ಯ ಹೋರಾಟ

ಗಳು ಮೂಡಿಬಂದವು. ಇವುಗಳೆಲ್ಲದರ ಪರಿಣಾಮವಾಗಿ ಇಡೀ ಪ್ರದೇಶದಲ್ಲಿ ಒಂದುರೀತಿಯ ಹೊಸ ಶಕ್ತಿ ಸಮತೋಲನವೇರ್ಪಟ್ಟು ಪ್ಯಾಲೆಸ್ಟೈನ್ ಜನತೆಯ ಹೋರಾಟಕ್ಕೆ ಹೊಸ ಹುರುಪು ಬಂದಿತು.

ಈ ಹಿಂದೆ ಇಸ್ರೇಲನ್ನು ಅರಬ್ ರಾಷ್ಟ್ರಗಳು ಮತ್ತು ಅವುಗಳ ತೈಲ ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸಲು ಉಪಯೋಗಿಸಲಾಗುತ್ತಿತ್ತು. 1956ರಲ್ಲಿ ಸೂಯೆಜ್ ಕಾಲುವೆಯನ್ನು ಮರಳಿ ಪಡೆಯಲು ಮತ್ತು ನಾಸೆರ್ ಸರ್ಕಾರವು ಫ್ರಾನ್ಸ್ ಮತ್ತು ಬ್ರಿಟನ್‌ನ ಬೇಡಿಕೆಗಳಿಗೆ ಮಣಿಯುವಂತೆ ಮಾಡಲು ಇಸ್ರೇಲ್ ಇವರೊಂದಿಗೆ ಸಹಕರಿಸಿತು. ಈಜಿಪ್ಟ್ ಜನತೆಯ ಸ್ವಾತಂತ್ರ್ಯಕ್ಕೆ ಬೆಂಬಲವಾಗಿ ನಿಂತ ಸೋವಿಯೆತ್ ಯೂನಿಯನ್ನಿನ ನಿಲುವಿನಿಂದಾಗಿ ಈ ಸಾಮ್ರಾಜ್ಯಶಾಹಿ ಸಂಚು ವಿಫಲವಾಯಿತು.

ಅಂತರರಾಷ್ಟ್ರೀಯ ಪರಿಸ್ಥಿತಿಯೂ ಈ ಹೊತ್ತಿಗೆ ಗಮನಾರ್ಹವಾಗಿ ಬದಲಾಗಿತ್ತು. ಸಾಮ್ರಾಜ್ಯಶಾಹಿಗಳು ತಮ್ಮ ಇಚ್ಛೆಯನ್ನು ಜನತೆಯ ಮೇಲೆ ಹೇರುವ ಸ್ಥಿತಿಯಲ್ಲಿರಲಿಲ್ಲ. ಸಮಾಜವಾದಿ ದೇಶಗಳ ಅಸ್ತಿತ್ವ ಮತ್ತು ಅವುಗಳ ಶಾಂತಿ ನೀತಿಯ ಅನುಸರಣೆಯಿಂದ ಬೆಳೆಯುತ್ತಿದ್ದ ಗೌರವ, ಅವುಗಳ ಆರ್ಥಿಕ ಹಾಗೂ ಮಿಲಿಟರಿ ಪ್ರಾಬಲ್ಯ, ಮತ್ತು ಇವುಗಳಿಗೆ ಪೂರಕವಾಗಿ ಬೆಳೆದು ಬರುತ್ತಿದ್ದ ರಾಷ್ಟ್ರೀಯ ವಿಮೋಚನಾ ಚಳುವಳಿಗಳು ಸಾಮ್ರಾಜ್ಯಶಾಹಿ ದೇಶಗಳ ಷಡ್ಯಂತ್ರವನ್ನು ಮಧ್ಯಪ್ರಾಚ್ಯದಲ್ಲಿ ವಿಫಲಗೊಳಿಸಿದವು.

ಪಿ. ಎಲ್. ಓ.ನ ಸ್ಥಾಪನೆ

ಪ್ಯಾಲೆಸ್ಟೈನ್ ಜನತೆಯ ವಿಮೋಚನಾ ಹೋರಾಟದಲ್ಲಿ ಪ್ಯಾಲೆಸ್ಟೈನ್ ಲಿಬರೇಷನ್ ಆರ್ಗನೈಜೇಷನ್‌ನ ಸ್ಥಾಪನೆ ಒಂದು ಮಹತ್ವದ ಮೈಲಿಗಲ್ಲು. ತೀವ್ರ ಬಿಕ್ಕಟ್ಟಿನ ದಿನಗಳಲ್ಲಿ ಪ್ಯಾಲೆಸ್ಟೈನ್ ಜನತೆಯ ಸಶಸ್ತ್ರ ಬಂಡಾಯ ಪಡೆಯಾದ ಈ ಸಂಘಟನೆ ಅವರ ಸ್ವಾತಂತ್ರ್ಯ ಬಯಕೆಯ ಕಿಚ್ಚನ್ನು ಜೀವಂತವಾಗಿರಿಸಿತು. ಲೆಬನಾನ್ ಯುದ್ಧದಲ್ಲಿ ತಮ್ಮ ಹೋರಾಟದ ಕಣವನ್ನು ರಕ್ಷಿಸುವಲ್ಲಿ ಇಸ್ರೇಲ್ ವಿರುದ್ಧ ನಡೆಸಿದ ಹೋರಾಟ ನಿಜಕ್ಕೂ ಸ್ಮರಣೀಯ. ಲೆಬನಾನ್ ರಾಷ್ಟ್ರೀಯ ಚಳುವಳಿಯ ಪ್ರಜಾಪ್ರಭುತ್ವ ಶಕ್ತಿಗಳು ಮತ್ತು ಪ್ಯಾಲೆಸ್ಟೈನ್ ಜನತೆಯ ಒಕ್ಕೂಟದಿಂದಾಗಿ ಲೆಬನಾನನ್ನು ಇಸ್ರೇಲಿನ ಹೊಸ ಕಾಲನಿಯೊಂದನ್ನಾಗಿ ಪರಿವರ್ತಿಸುವ ಪ್ರಯತ್ನ ಫಲಿಸಲಿಲ್ಲ.

1967 ಜೂನ್‌ನಲ್ಲಿ ಝಿಯೋನಿಸ್ಟ್ ಆಡಳಿತ ಘೋಷಿಸಿದ 6 ದಿನಗಳ ಯುದ್ಧದಲ್ಲಿ ಇಸ್ರೇಲ್ ಹೆಚ್ಚು ಪ್ರದೇಶಗಳ ಮೇಲೆ ತನ್ನ ಹಿಡಿತವನ್ನು ಚಾಚಿತು. ಸಿನಾಯ್ ಮರುಭೂಮಿ, ಸೂಯೆಜ್ ಕಾಲುವೆ, ಸಿರಿಯಾದಲ್ಲಿನ ಗೋಲನ್ ಹೈಟ್ಸ್, ಗಾಜಾ ಸ್ಟ್ರಿಪ್ ಮತ್ತು ಜೆರೂಸಲಂ ಒಳಗೊಂಡಂತೆ ಜೋರ್ಡಾನ್ ನದಿಯ ಪಶ್ಚಿಮ ದಂಡೆಯುದ್ದಕ್ಕೂ ಇಸ್ರೇಲ್ ತನ್ನ ಹಿಡಿತವನ್ನು ಸಾಧಿಸಿತು. ಅರಬರಿಗೆ ಇದೊಂದು ಮರೆಯಲಾಗದ ಸೋಲು. ಸಾಮ್ರಾಜ್ಯಶಾಹಿಗಳಿಂದ ತರಬೇತಿ ಪಡೆದ ಮತ್ತು ಆಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿದ್ದ ಇಸ್ರೇಲ್ ಸೇನೆಗೆ ಅಸಂಘಟಿತ ಅರಬರನ್ನು ಸೋಲಿಸುವುದು ಸುಲಭವಾಯಿತು.

ಆರು ವರ್ಷಗಳ ನಂತರ ಸೋವಿಯತ್ ಸಹಕಾರದೊಂದಿಗೆ ಪುನರ್ರಚಿಸಿದ ಮತ್ತು ತರಬೇತಿ ಪಡೆದ ಈಜಿಪ್ಟ್ ಸೇನೆ ಝಿಯೋನಿಸ್ಟ್ ಶಕ್ತಿಗಳಿಗೆ ಮೊದಲ ಬಾರಿಗೆ ಮಣ್ಣು ಮುಕ್ಕಿಸಿದವು. ಸಿರಿಯನ್ ಭಾಗದಲ್ಲೂ ತೀವ್ರ ಘರ್ಷಣೆಗಳು ನಡೆದು ಇಸ್ರೇಲ್ ಆಕ್ರಮಿಸಿದ್ದ ಕೆಲವು ಪ್ರದೇಶಗಳನ್ನು ಮರಳಿ ಪಡೆಯುವಲ್ಲಿ ಅರಬರು ಯಶಸ್ವಿಯಾದರು. ಇದರೊಂದಿಗೆ ಯಹೂದ್ಯರು ಅಜೇಯರು ಎಂಬ ಮಾತನ್ನು ಸುಳ್ಳಾಗಿಸಿದರು.

ಹೊಸ ತಿರುವು

1973ರಲ್ಲಿ ಅರಬ್ ತೈಲ ಉತ್ಪಾದಕ ದೇಶಗಳು ಕುವೈತ್‌ನಲ್ಲಿ ಸಭೆ ಸೇರಿ ತೆಗೆದುಕೊಂಡ ನಿರ್ಣಯ ಪಶ್ಚಿಮ ಏಷ್ಯಾದಲ್ಲಿ ನಡೆದ ಘಟನೆಗಳಲ್ಲಿ ಬಹು ಮುಖ್ಯವಾಗಿದೆ. ತಮ್ಮ ನಿರ್ಣಯದಲ್ಲಿ ತೈಲ ಉತ್ಪಾದನೆಯನ್ನು ಕಡಿಮೆಗೊಳಿಸುವುದು ಮತ್ತು ಇಸ್ರೇಲ್ ಬೆಂಬಲಿಸುವ ದೇಶಗಳಿಗೆ ತೈಲ ಸರಬರಾಜನ್ನು ಕಡಿತಗೊಳಿಸುವುದಾಗಿ ನಿರ್ಧರಿಸಿದವು. ಈ ತೈಲ ದಿಗ್ಬಂಧನದಿಂದಾಗಿ ಪಶ್ಚಿಮ ರಾಷ್ಟ್ರಗಳು ವಿಮಂಚನೆಗೊಳಗಾದವು. ಒಂದು ತಿಂಗಳ ನಂತರ ಯುರೋಪಿಯನ್ ಎಕನಾಮಿಕ್ ಕಮ್ಯುನಿಟಿಯ 9 ಸದಸ್ಯ ರಾಷ್ಟ್ರಗಳು ಅರಬ್ ಆಕ್ರಮಿತ ಪ್ರದೇಶದಿಂದ ಹಿಂದೆ ಸರಿಯುವಂತೆ ಇಸ್ರೇಲನ್ನು ಒತ್ತಾಯಿಸುವ ಹೇಳಿಕೆ ನೀಡಿದವು. ಅರಬರ ತೈಲ ದಿಗ್ಬಂಧನ ಕ್ರಮದಿಂದಾಗಿ ಅಮೇರಿಕಾ ಕಂಗಾಲಾಯಿತು.

ಅಲ್ಲಿಂದೀಚೆಗೆ ಅರಬ್ ರಾಷ್ಟ್ರಗಳಿಗೆ ಒಪ್ಪಿಗೆಯಾಗುವಂತೆ ಅರಬ್-ಇಸ್ರೇಲಿ ವಿವಾದವನ್ನು ಪರಿಹರಿಸುವ ದಿಕ್ಕಿನಲ್ಲಿ ಸಾಮ್ರಾಜ್ಯಶಾಹಿಯು ತನ್ನ ವಿದೇಶಾಂಗ ನೀತಿಯನ್ನು ರೂಪಿಸಿಕೊಳ್ಳುತ್ತಿದೆ. ನಿಕ್ಸನ ಆಡಳಿತದ ಹೆನ್ರಿ ಕಿಸಿಂಜರ್ ಅರಬ್ ಸರ್ಕಾರಗಳು ಅರಬ್ ಜನತೆಗೆ ದ್ರೋಹ ಬಗೆಯುವಂತೆ ಪ್ರೇರೇಪಿಸುವಲ್ಲಿ ಯಶಸ್ವಿಯಾದ. ಈ ಸಂಚಿಗೆ ಬಲಿಯಾದ ದೇಶವೆಂದರೆ ಅನ್ವರ್ ಅಲ್ ಸಾದತ್‌ನ ಈಜಿಪ್ಟ್ ಸರ್ಕಾರ.

ಕ್ಯಾಂಪ್ ಡೇವಿಡ್ ಒಪ್ಪಂದ

ಕುಟಿಲ ರಾಜತಾಂತ್ರಿಕ ಸಂಧಾನದ ಮೂಲಕ ಅರಬರ ಐಕ್ಯತೆಗೆ ಭಾರಿ ಪೆಟ್ಟುಕೊಡುವ ಅಂಶಗಳನ್ನು ಈಜಿಪ್ಟ್ ಜನತೆಯ ಮೇಲೆ ಸಾಮ್ರಾಜ್ಯಶಾಹಿಗಳು ಹೇರಿದರು. 1967ರಲ್ಲಿ ಕಳೆದುಕೊಂಡ ಭೂಮಿಯನ್ನು ಮರಳಿ ಪಡೆದಿರುವುದಕ್ಕೆ ಪ್ರತಿಯಾಗಿ ಝಿಯೋನಿಸ್ಟರ ಎಲ್ಲ ಬೇಡಿಕೆಗಳನ್ನೂ ಈಜಿಪ್ಟ್ ಒಪ್ಪಿಕೊಳ್ಳಬೇಕಾಯಿತು.

ಈ ಒಪ್ಪಂದದಲ್ಲಿ ವಾಸ್ತವವಾಗಿ ಇಸ್ರೇಲ್ ಯಾವುದೇ ರಿಯಾಯತಿಯನ್ನು ಅರಬರಿಗೆ ಕೊಡಲಿಲ್ಲ. ತನ್ನ ನಿರ್ಬಂಧಗಳನ್ನು ವಿಜಯೀ ರಾಷ್ಟ್ರವಾಗಿ ಸಾದತ್‌ನ ಮೇಲೆ ಹೇರಿದ್ದಲ್ಲದೆ ಜರೂಸಲಂನ ಮೇಲೆ ಯಹೂದ್ಯರ ಸಾರ್ವಭೌಮ ಅಧಿಕಾರವನ್ನು ಒಪ್ಪುವಂತೆಮಾಡಿತು. ಇಂತಹ ಒಪ್ಪಂದವೊಂದಕ್ಕೆ ಸಾದತ್ ಅನುಮೋದಿಸುವಂತೆ ಮಾಡುವಲ್ಲಿ ಅಮೇರಿಕಾವು ನಿರಂತರವಾಗಿ ಆರ್ಥಿಕ ಬಿಕ್ಕಟ್ಟಿಗೆ ಒಳಗಾದ ಈಜಿಪ್ಟಿಗೆ ಎಲ್ಲ ರೀತಿಯ ಆರ್ಥಿಕ ಸಹಕಾರ ನೀಡುವುದಾಗಿ ಕಾರ್ಟರ್ ಸರ್ಕಾರವು ಆಶ್ವಾಸನೆ ನೀಡಿತು. ಅಂತೆಯೇ ಈ ಒಪ್ಪಂದವನ್ನು ಜಾರಿಗೊಳಿಸುವಲ್ಲಿ ತನ್ನ ಎಲ್ಲ ಅಧಿಕಾರವನ್ನು ಉಪಯೋಗಿಸುವುದಾಗಿ ಇಸ್ರೇಲಿಗೆ ಅಮೇರಿಕಾವು ಭರವಸೆ ನೀಡಿತು. ಈ ಒಪ್ಪಂದಕ್ಕೆ ಕೊನೆಗೆ ವಾಷಿಂಗ್‌ಟನ್‌ನಲ್ಲಿ ಸಹಿಹಾಕಲಾಯಿತು.

ಇದೊಂದು ಶಾಂತಿಯುತ ಒಪ್ಪಂದವಾಗಿರುವುದಕ್ಕೆ ಬದಲಾಗಿ ಪ್ರಗತಿಪರ ಕ್ರಾಂತಿಕಾರಿ ಸ್ವಾತಂತ್ರಪ್ರೇಮಿ ಅರಬ್ ರಾಷ್ಟ್ರಗಳ ವಿರುದ್ಧದ ಅಮೇರಿಕಾ ಈಜಿಪ್ಟ್ ಇಸ್ರೇಲ್ ಒಳಗೊಂಡಂತ ಮಿಲಿಟರಿ ಕೂಟವಾಗಿದೆ. ಇದಕ್ಕೆ ಪ್ರತಿಯಾಗಿ ಅಲ್ಜೀರಿಯಾ, ಲಿಬ್ಯ, ಸಿರಿಯಾ. ಡೆಮಾಕ್ರಟಿಕ್ ಯೆಮನ್ ಒಳಗೊಂಡಂತೆ ಅರಬರು ಒಂದು ವಿರೋಧಿ ರಂಗವನ್ನು ರಚಿಸಿದರು. ಈ ರಂಗವನ್ನು ಅರಬ್ ಜನತೆಯ ಹಕ್ಕುಗಳನ್ನು ರಕ್ಷಿಸಲು ರಚಿಸಲಾಗಿದೆ. ಮತ್ತು ಮಧ್ಯಪ್ರಾಚ್ಯದಲ್ಲಿ ಸಾಮ್ರಾಜ್ಯಶಾಹಿ ಮತ್ತು ಪ್ರತಿಗಾಮಿ ಶಕ್ತಿಗಳ ಷಡ್ಯಂತ್ರವನ್ನು ವಿಫಲಗೊಳಿಸುವಲ್ಲಿ ಪ್ರಮುಖಪಾತ್ರವಹಿಸುತ್ತಿದೆ.

ಅಮೇರಿಕಾದಿಂದ ಹೇರಲ್ಪಟ್ಟಿರುವ ಕ್ಯಾಂಪ್ ಡೇವಿಡ್ ಒಪ್ಪಂದಕ್ಕೆ ಅರಬ್ ರಾಷ್ಟ್ರಗಳ ವಿರೋಧ ತೀವ್ರವಾಗಿದೆ. ಕೆಲವು ಬಾಲಬಡುಕ ರಾಷ್ಟ್ರಗಳನ್ನುಳಿದು ಎಲ್ಲ ಅರಬ್ ರಾಷ್ಟ್ರಗಳು ಪ್ಯಾಲೆಸ್ಟೈನ್ ಅರಬ್ ಜನತೆಯ ಸ್ವತಂತ್ರ ರಾಷ್ಟ್ರ ಸ್ಥಾಪನೆಯ ಬೇಡಿಕೆಗೆ ಬೆಂಬಲ ನೀಡಿವೆ. ಈ ಅಂಶವು 1978ರಲ್ಲಿ ಬಾಗ್ದಾದ್‌ನಲ್ಲಿ ನಡೆದ ಅರಬ್ ರಾಷ್ಟ್ರಗಳ ಶೃಂಗಸಭೆಯಿಂದ ವ್ಯಕ್ತವಾಗುತ್ತದೆ.

1979ರಲ್ಲಿ ಹವಾನಾದಲ್ಲಿ ನಡೆದ ಅಲಿಪ್ತ ದೇಶಗಳ ಆರನೇ ಸಮ್ಮೇಳನವು ಪ್ಯಾಲೆಸ್ಟೈನ್ ವಿವಾದವು ಮಧ್ಯಪ್ರಾಚ್ಯ ಸಮಸ್ಯೆಯ ಮೂಲಪ್ರಶ್ನೆಯಾಗಿದೆ ಎಂದು ಹೇಳಿದೆ. ಪ್ಯಾಲೆಸ್ಟೈನ್ ಮತ್ತು ಇತರ ಅರಬ್ ದೇಶಗಳ ಆಕ್ರಮಿತ ಪ್ರದೇಶದಿಂದ ನಿರ್ಬಂಧ ರಹಿತವಾಗಿ ಇಸ್ರೇಲ್ ಹಿಂತೆಗೆಯದೆ ಮತ್ತು ಅರಬರಿಗೆ ತಮ್ಮ ಸ್ವತಂತ್ರ ರಾಷ್ಟ್ರವನ್ನು ಸ್ಥಾಪಿಸುವ ಹಾಗೂ ಎಲ್ಲ ರಾಷ್ಟ್ರೀಯತೆ ಹಕ್ಕುಗಳು ದೊರೆಯದೆ ಈ ಪ್ರದೇಶದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿತು.

ಯುದ್ಧದ ಅಂಚಿನಲ್ಲಿ

ಕ್ಯಾಂಪ್ ಡೇವಿಡ್ ಒಪ್ಪಂದದ ಎರಡು ವರ್ಷಗಳಲ್ಲಿ ಅಮೇರಿಕ ಸಾಮ್ರಾಜ್ಯಶಾಹಿ–ಝಿಯೋನಿಸ್ಟ ಇಸ್ರೇಲ್ ಆಕ್ರಮಣ ನೀತಿಯು ಪುನಃ ಬೆಳೆಯುತ್ತಿದೆ. ಇರಾಕ್‌ನ ಅಣು ಸ್ಥಾವರದ ಮೇಲೆ ಇಸ್ರೇಲ್‌ನ ಆಕ್ರಮಣ; ಲೆಬನಾನ್‌ನ ಪ್ಯಾಲೆಸ್ಟೈನ್ ನೆಲೆಗಳ ಮೇಲೆ ಪ್ರತಿನಿತ್ಯ ಧಾಳಿ ಮತ್ತು ಇಸ್ರೇಲ್ ತೆರವು ಮಾಡಿರುವ ಸಿನಾಯನಲ್ಲಿ ನೆಲೆಗೊಳಿಸಿರುವ 'ಬಹುರಾಷ್ಟ್ರೀಯ ಸೇನೆ' ಎಂಬ ಹೆಸರಿನ ಅಮೇರಿಕಾದ ಸೈನ್ಯ ಇವುಗಳಿಂದಾಗಿ ಪಶ್ಚಿಮ ಏಷ್ಯಾವನ್ನು ಯುದ್ಧದ ಅಂಚಿಗೆ ತಳ್ಳಲಾಗಿದೆ.

○

ಬದುಕಿಗೆ ನಿಷ್ಠೆತೋರಿಸುವ ಕಥೆಗಳು

ಗುಡಿಹಳ್ಳಿ ನಾಗರಾಜ್

[“ಬೂದುಬಣ್ಣದ ಕಾಂಗರೂ”; ಪುಟ : 198, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ನ ಕತೆಗಳು. ಪ್ರಧಾನಸಂಪಾದಕ : ನಿರಂಜನ, ಬೆಲೆ–10ರೂ. ಪ್ರಕಟನೆ : ನವಕರ್ನಾಟಕ]

“ಈ ನೆಲ ನಮ್ಮದು. ಈ ನೆಲ ಮತ್ತಾರದೂ ಅಲ್ಲ. ಇದು ನಮ್ಮ ಹಿರಿಯರ ನೆಲ. ನಾವು ಹುಟ್ಟಿದ ಮಣ್ಣು. ಈ ಮಣ್ಣಿನಲ್ಲೇ ನಮ್ಮ ದೇಹ ಮಣ್ಣಾಗೋದು. ಆಗ ಮಾತ್ರ ನಮ್ಮ ಆತ್ಮಗಳು ನಮ್ಮ ಪೂರ್ವಜರ ಆತ್ಮಗಳೊಂದಿಗೆ ಸೇರೋದು. ಈ ಮಣ್ಣಿನ ಮರಗಿಡಗಳಲ್ಲಿ, ಪ್ರಾಣಿಗಳಲ್ಲಿ, ಪಕ್ಷಿಗಳಲ್ಲಿ ಮತ್ತು ನೆಲದ ಮೇಲೆ ಹರಿಯುವ ಜಂತುಗಳಲ್ಲಿ ಇರುವ ಆತ್ಮಗಳನ್ನು ನಾವು ಪ್ರೀತಿಸ್ತೇವೆ. ಈ ಬಂಡೆಗಳನ್ನು ಮತ್ತು ಮರಗಿಡಗಳನ್ನು, ಬೆಟ್ಟಗಳನ್ನು ಮತ್ತು ತೊರೆಗಳನ್ನು, ಮಣ್ಣು, ಮರಳು, ಹುಲ್ಲು ಮತ್ತು ಮುಳ್ಳಿನ ಪೊದರುಗಳನ್ನು ಬೇರೆ ಕಡೆಗೆ ಒಯ್ಯೋದು ಹೇಗೆ ಸಾಧ್ಯ”? (ನಮ್ಮದೀನೆಲ ಕತೆಯಿಂದ) ಹೀಗೆಂದು ಧ್ವನಿ ಎತ್ತಿದ್ದ ಒರ್ವ ಕಥಾ ನಾಯಕನ ಹಾಡು-ಪಾಡು ಆಸ್ಟ್ರೇಲಿಯಾದ ಹಾಡು ತನ್ಮೂಲಕ ಇಡೀ ಮನುಕುಲದ ಪಾಡು. ಚಿನ್ನದ ಆದಿರಿನ ದಾಹ, ಅವನ್ನು ಪತ್ತೆ ಹಚ್ಚುವಲ್ಲಿ ಮೂಲನಿವಾಸಿಗಳ ಚಮತ್ಕಾರದ ಬುದ್ಧಿ, ಅದಕ್ಕಾಗಿ ಪಟ್ಟ ಪಾಡುಗಳು, ತಮ್ಮ ನೆಲದ ಮೇಲಿನ ಮೋಹ, ತಮ್ಮ ಬದುಕಿನ ಕನಸುಗಾರಿಕೆ, ತಮ್ಮ ಸಂಸ್ಕೃತಿಯ ಬಗೆಗೆ ಇರುವ ಅಭಿಮಾನ ಈ ಎಲ್ಲವನ್ನು ಇಲ್ಲಿರುವ ಕಥೆಗಳು ಒಳಗೊಂಡಿವೆ. 'ವಿಶ್ವಕಥಾಕೋಶ'ದ ಯೋಜನೆಯ ಎಂಟನೇಯ ಸಂಪುಟದ ಈ ಪುಸ್ತಕ (ಬೂದುಬಣ್ಣದ ಕಾಂಗರೂ) ಆಸ್ಟ್ರೇಲಿಯಾದ ಹದಿನಾಲ್ಕು ಕಥೆಗಳು, ನ್ಯೂಜಿಲೆಂಡಿನ ಎರಡು ಕಥೆಗಳನ್ನು ಒಳಗೊಂಡಿದೆ. ಶಿಕ್ಷೆಗೆ ಗುರಿಯಾದ ಪಾತಕಿಗಳನ್ನು, ಸಮಾಜಕ್ಕೆ ಬೇಡವಾದವರನ್ನು ಅತ್ಯಂತ ಸುಸಂಸ್ಕೃತ ನಾಗರಿಕರೆನಿಸಿಕೊಂಡ ಇಂಗ್ಲೆಂಡಿನವರು ಈ ದೇಶಗಳಲ್ಲಿ ನೆಲೆಸಲು 1788ರಲ್ಲಿ ಕಳಿಸಿದಂದಿನಿಂದ ಇಲ್ಲಿಯ ಸಾಂಸ್ಕೃತಿಕ ಪರಂಪರೆ ವಿಶಿಷ್ಟವಾದುದು. ಈ ಸಾಮ್ರಾಜ್ಯಶಾಹಿಗಳು ಮೂಲನಿವಾಸಿಗಳ ಮೇಲೆ ನಡೆಸಿದ ದಬ್ಬಾಳಿಕೆ ಸುಲಿಗೆ ಇಲ್ಲಿಯ ಕಥಾವಸ್ತು. ಹಲವಾರು ಜನಾಂಗಗಳ ನಡುವೆ ತಮ್ಮತನಕ್ಕೆ ಹೋರಾಟ. ಬಲಿಷ್ಠರೂ, ಸುಸಂಸ್ಕೃತರೂ, 'ಸೂರ್ಯ ಮುಳುಗದ ಸಾಮ್ರಾಜ್ಯ'ದ ಜನ (ಇಂಗ್ಲೀಷರು) ಇಲ್ಲಿಯ ಬಂಗಾರಕ್ಕೆ ಸಂಪತ್ತಿಗೆ ಲಗ್ಗೆ ಇಟ್ಟರು. ಅವರಲ್ಲೇ ಆತ್ಮವಿಮರ್ಶೆ ಮಾಡಿಕೊಳ್ಳುವ ಒಬ್ಬನಿಂದ ಬರುವ ಈ ಮಾತು “ನಾವು ಕಾಡುಗಳಿಗೆ ಬೆಂಕಿ ಇಟ್ಟು ಅವರನ್ನೂ ಅವರದನ್ನೂ ಸುಟ್ಟೆವು. ಅವರ ಜೊತೆಗೆ ಅವರ ಜ್ಞಾನ ಭಂಡಾರವನ್ನೂ ಅವರ ಇತಿಹಾಸವನ್ನೂ ಭಸ್ಮ ಮಾಡಿದೆವು ('ಪ್ಲೋರಾ').

ಇಲ್ಲಿಯ ಒಟ್ಟು ಕಥೆಗಳಿಗೆ ಪ್ರಾತಿನಿಧಿಕ ಎನ್ನುವಂತಹ ಕಥೆ 'ಬೂದುಬಣ್ಣದ ಕಾಂಗರೂ' ಸಾಂಕೇತಿಕವಾಗಿ ಆಸ್ಟ್ರೇಲಿಯಾದ ಒಟ್ಟು ಜೀವನವನ್ನು ಪ್ರತಿನಿಧಿಸುವಂತಹದು. ಸ್ಪ್ರಿಂಗರ್ ನಾಯಿ ಬೇಟೆಯಾಡಿ ಕಾಂಗರೂವನ್ನು ಕೊಂದ ರೀತಿ ಕಾಂಗರೂ ಸಾಯುವ ಹೊತ್ತಿನಲ್ಲೂ ಬದುಕಿಗೆ ತಾನೂ ಪೇಚಾಡಿ ತನ್ನ ಮಗುವನ್ನು ಬದುಕಿಸುವತ್ತ ಧಾವಿಸುವ ಕಥೆ ಮಾನವೀಯವಾದುದು : ಮನಮಿಡಿಯುವಂತದು. ಹಾಡುಗಾರ ಕ್ರೈಜಿಕ್‌ನ ಮುಗ್ಧ, ಸರಳ, ನೇರ ಕಲಾಹೃದಯ ತನ್ನ ಮೇಲೆ ಬಿಳಿಯರು ಸೂಕ್ಷ್ಮವಾಗಿ ನಡೆಸಿದ ಶೋಷಣೆ ಸದ್ದುಗದ್ದಲವಿಲ್ಲದೇ ಕಲಾತ್ಮಕವಾಗಿ ಸಾಧಿಸಿದ ರೀತಿ ಅಗಾಧವಾದುದು. 'ಪ್ಲೋರಾ' 'ನಮ್ಮದೀ ನೆಲ' ತಮ್ಮ ಬದುಕಿಗೆ ತಮ್ಮ ನೆಲಕ್ಕೆ ತಮ್ಮ ಸಂಸ್ಕೃತಿಗೆ ತೋರಿಸುವ ಪ್ರೀತಿ ಮನೋಜ್ಞವಾದುದು. 'ಅಜ್ಞರು' ಕೆಲಸದಲ್ಲಿರುವ ತರುಣಿ-ಕೆಲಸ ಇಲ್ಲದಿರುವ ತರುಣ ಇವರಿಬ್ಬರ ನಡುವಿನ ಸೂಕ್ಷ್ಮ ಸಂಬಂಧಗಳನ್ನು ದಾಖಲಿಸುವ ಕಥೆ. 'ಎನ್‌ಗೂಲ' ಬ್ರಿಟಿಷ್ ಜನಾಂಗವಾದಿ ಫ್ಯಾಸಿಸ್ಟರು ಕಪ್ಪು ಮೂಲನಿವಾಸಿಗಳನ್ನು ಹೆಸರಿಲ್ಲದಂತೆ ಮಾಡಿ ತಮ್ಮ ಬಿಳಿ ಜನರನ್ನು ಪ್ರತಿಷ್ಠಾಪಿಸಲು ಹೂಡಿರುವ ಫ್ಯಾಸಿಸ್ಟ್ ಮನೋಭಾವಕ್ಕೆ ಇದಿರಾಗಿ ಬರುವ ಮಾನವೀಯ ಕಥೆ ಮನಮಿಡಿಯುವಂತಹದು. 'ಅವನ ತಂದೆಯ ಸಂಗಾತಿ' ದುಡಿಯುವ ಮೂಕ ಜನತೆಯ ದಾರುಣ ಕಥೆಯನ್ನು ಯಶಸ್ವಿಯಾಗಿ

[6ನೇ ಪುಟ ನೋಡಿ]

ವಿಚಾರ ಸಂಕಿರಣ

ದಿ. 16-8-81ರಂದು ತುಮಕೂರು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಆಶ್ರಯದಲ್ಲಿ "ಮತಾಂತರವು ಸಮಾಜದ ಅಸಮಾನತೆಯನ್ನು ತೊಲಗಿಸಬಲ್ಲದು" ಎಂಬ ವಿಚಾರದಬಗ್ಗೆ ಚರ್ಚಾಗೋಷ್ಠಿಯನ್ನು ನಗರದ ಪುರಭವನದಲ್ಲಿ ಏರ್ಪಡಿಸಲಾಗಿತ್ತು. ಈ ವಿಷಯದ ಪರವಾಗಿ ಶ್ರೀ ಟಿ.ಎ. ದಾಸಪ್ಪ, ಸರ್ವೋದಯ ಕಾರ್ಯಕರ್ತರು, (ಪ್ರಧಾನ ಪ್ರತಿಪಾದಕರಾಗಿದ್ದರು) ಶ್ರೀಯುತರುಗಳಾದ ಬಿ. ವೀರಭದ್ರಯ್ಯ, ಉಪನ್ಯಾಸಕರು, ಶ್ರೀ ಸಿದ್ಧಗಂಗಾ ವಿಜ್ಞಾನ ಕಲಾ ಕಾಲೇಜು, ತುಮಕೂರು. ಬಿ. ನಂಜುಂಡಪ್ಪ, ವಕೀಲರು, ತುಮಕೂರು. ಕೆ. ಎನ್. ನೀಲಕಂಠಯ್ಯ ಶ್ರೀ ಸಿದ್ಧಗಂಗಾ ಸನಿವಾಸ ಪ್ರೌಢಶಾಲೆಯ ಉಪಾಧ್ಯಾಯರು, ಸಿದ್ಧಗಂಗೆ, ಶಂಕರಲಿಂಗಯ್ಯ, ಪತ್ರಕರ್ತರು, ಬೆಂಗಳೂರು. ಈ ವಿಚಾರದ ಬಗ್ಗೆ ಪರವಾಗಿ ಮಾತನಾಡಿದರು.

ವಿರೋಧವಾಗಿ ಕಾಂ. ಕೆ. ಆರ್. ನಾಯಕ್ (ಕಾರ್ಮಿಕ ಮುಖಂಡರು) ಪ್ರಧಾನ ವಿರೋಧಕರಾಗಿ ಭಾಗವಹಿಸಿದ್ದರು. ಶ್ರೀಯುತರುಗಳಾದ ವಿದ್ವಾನ್ ಎಸ್. ಪಿ. ಶಿವಶಂಕರ್, ಪ್ರಿನ್ಸಿಪಾಲರು, ಶ್ರೀ ಸಿದ್ಧಗಂಗಾ ಸಂಸ್ಕೃತ ಕಾಲೇಜು, ತುಮಕೂರು. ಶಿವಪ್ರಕಾಶ್, ಆಂಗ್ಲ ಉಪನ್ಯಾಸಕರು, ಸರಕಾರಿ ಕಲಾ ಕಾಲೇಜು. ಪಿ. ಸಿ. ಶಿವನಂಜಪ್ಪ, ವಕೀಲರು. ಹೆಚ್. ಜಿ. ಸಣ್ಣಗುಂಡಯ್ಯ, ಉಪನ್ಯಾಸಕರು. ಸರಕಾರಿ ಕಲಾ ಕಾಲೇಜು. ಕೆ. ಬಿ. ಸಿದ್ಧಯ್ಯ ಉಪನ್ಯಾಸಕರು ಸರಕಾರಿ ಕಲಾ ಕಾಲೇಜು, ತಿಪಟೂರು. ಜಿ. ಎಂ. ರಾಜಾಚಾರ್ ಪತ್ರಿಕೋದ್ಯಮಿಗಳು ಈ ವಿಷಯದ ಮೇಲೆ ವಿರೋಧವಾಗಿ ಮಾತನಾಡಿದರು. ಸಮಯವನ್ನು 12 ನಿಮಿಷಗಳ ಕಾಲ ಮಿತಿಗೊಳಿಸಲಾಗಿತ್ತು.

ಪ್ರಧಾನ ಪ್ರತಿಪಾದಕರಾಗಿ ಮಾತನಾಡಿದ ಸರ್ವೋದಯ ಕಾರ್ಯಕರ್ತರಾದ ಶ್ರೀ ಟಿ. ಎ. ದಾಸಪ್ಪನವರು ತಮ್ಮ ವಾದದಲ್ಲಿ ಸ್ವತಂತ್ರ ಬಂದು 34 ವರುಷಗಳಾದರೂ ಹರಿಜನರ ಸ್ಥಿತಿಗತಿಗಳು ಸುಧಾರಿಸಿಲ್ಲ. ದಲಿತರ ಏಳಿಗೆಗೆ ಕಾನೂನುಗಳು ಕೇವಲ ಪುಸ್ತಕದ ಬದನೇಕಾಯಿಯಾಗಿಯೇ ಉಳಿದಿದೆ. ಇಂದಿಗೂ ಹಳ್ಳಿಗಳಲ್ಲಿ ದಲಿತರ ಸ್ಥಾನಮಾನಗಳು ಉತ್ತಮಗೊಂಡಿಲ್ಲ. ಬಾವಿಗಳಲ್ಲಿ ದಲಿತರನ್ನು ನೀರಿಗೆ ಬಿಡುವುದಿಲ್ಲದ್ದನ್ನು ನಾವು ಎಷ್ಟೋ ಹಳ್ಳಿಗಳಲ್ಲಿ ಕಾಣಬಹುದು. ಇಂತಹ ಎಲ್ಲಾ ವಿಧವಾದ ಸಮಾಜದ ಸಂಕಷ್ಟಗಳಿಂದ ಹರಿಜನರು ತಮ್ಮ ನೋವನ್ನು ಸಹಿಸಲಾರದೆ ಹಿಂದೂ ಧರ್ಮದಿಂದ ಬೇರ್ಪಟ್ಟು ಬೌದ್ಧ, ಲಿಂಗಾಯತ, ಮುಸ್ಲಿಂ, ಮತ್ತಿತರ ಧರ್ಮಗಳಿಗೆ ಪರಿವರ್ತನೆ ಆಗುತ್ತಿದ್ದಾರೆ. ಇಂತಹ ಕ್ರಮವನ್ನು ನಾನು ಖಂಡಿತವಾಗಿ ಬೆಂಬಲಿಸುತ್ತೇನೆಂದು ವಾದಿಸಿದರು.

ಪ್ರಧಾನ ವಿರೋಧವಾಗಿ ಮಾತನಾಡಿದ ಕಾರ್ಮಿಕ ಮುಖಂಡರಾದ ಕಾಂ. ಕೆ. ಆರ್. ನಾಯಕ್‌ರವರು ತಮ್ಮ ಸುದೀರ್ಘವಾದ ವಾದದಲ್ಲಿ "ವರ್ಗ ಮತ್ತು ಜಾತಿ"ಯನ್ನು ಕೂಲಂಕುಶವಾಗಿ ವಿಶ್ಲೇಷಿಸಿದರು. ಭಾರತದಲ್ಲಿ ಜಾತಿಪದ್ಧತಿಯು ಬಹಳ ವಿಚಿತ್ರದಿಂದ ಕೂಡಿದುದಾಗಿದೆ. ಈ ಜಾತಿ ಪದ್ಧತಿಯನ್ನು ತೊಲಗಿಸಲು ಬುದ್ಧ ರಾಮಾನುಜಾಚಾರ್ಯ, ಏಸುಕ್ರಿಸ್ತ, ಮತ್ತು ಬಸವಣ್ಣನವರಿಂದಲೇ ಸಾಧ್ಯವಾಗಲಿಲ್ಲ. ಇಂದಿನ ಸಮಾಜದಲ್ಲಿ ಹರಿಜನರು ಮುಸ್ಲಿಂ, ಕ್ರೈಸ್ತ, ಬೌದ್ಧ ಧರ್ಮಕ್ಕೆ ಸೇರಿಕೊಂಡಾಗ ಮಾತ್ರ ಈ ಸಮಾಜದಲ್ಲಿ ಬಡತನ, ನಿರುದ್ಯೋಗದಂತಹ ಮೂಲಭೂತ ಸಮಸ್ಯೆಯನ್ನು ಬಗೆಹರಿಸಲು ಖಂಡಿತ ಸಾಧ್ಯವಿಲ್ಲವೆಂದು ವಾದಿಸಿದ ಕೆ. ಆರ್. ಎನ್.ರವರು ಕುವೈತ್, ಇರಾನ್, ಇರಾಕ್, ಪಾಕಿಸ್ತಾನದಂತಹ ರಾಷ್ಟ್ರಗಳಲ್ಲಿ ಮುಸ್ಲಿಂರು ತಮ್ಮ ಸ್ಥಾನಮಾನದ ಬಗ್ಗೆ ಹೋರಾಟವನ್ನು ನಡೆಸುತ್ತಿರುವುದನ್ನೂ ವಿವರಿಸಿದರು.

ಇಂದು ಸಮಾಜದಲ್ಲಿ ಆರ್ಥಿಕ ಸಮಾನತೆ ಸಿಗಬೇಕಾದರೆ ಈ ದೇಶದಲ್ಲಿ ಮೂಲಭೂತ ಬದಲಾವಣೆಯಾಗಲೇಬೇಕು. ಈ ಬದಲಾವಣೆಯನ್ನು ಸೃಷ್ಟಿಸುವಲ್ಲಿ ಎಲ್ಲಾ ಜಾತಿಗಳಲ್ಲಿರುವ ಬಡವರು ಕೃಷಿಕಾರ್ಮಿಕರು ಕೂಲಿಗಾರರು ವಿದ್ಯಾರ್ಥಿಗಳು ಒಗ್ಗೂಡಿ ಬಂಡವಾಳಶಾಹೀ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಿದಾಗ ಮಾತ್ರ ಜಾತಿಗಳಲ್ಲಿರುವ ಅಂತರವನ್ನು ತೊಡೆಯಲು ಸಾಧ್ಯ. ಇಂದು ಜಗತ್ತಿನ ⅓ ನೇ ಭಾಗದಲ್ಲಿ ವರ್ಗ ರಹಿತ ಸಮಾಜವನ್ನು ಕಾಣಲು ಸಾಧ್ಯವಾಗಿರುವುದನ್ನು ಇತಿಹಾಸದಿಂದ ನೋಡುತ್ತಿದ್ದೇವೆ ಎಂದರು.

ಪ್ರಾರಂಭದಲ್ಲಿ ಸ್ವಾತಂತ್ರ ಹೋರಾಟಗಾರರ ಸಂಘದ ಖಜಾಂಚಿಗಳಾದ ಶ್ರೀ ಟಿ. ಕೆ. ಗೋವಿಂದರಾಜುರವರು ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ತಾರೇಗೌಡ ಮಾಜಿ ಶಾಸಕರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿಗಳಾದ ಶ್ರೀ ಆರ್ಯ ಮಿತ್ರರವರು ಆಗಮಿಸಿದ್ದರು.

ಸ್ವಾತಂತ್ರ ದಿನೋತ್ಸವದ ಅಂಗವಾಗಿ ಕಾಲೇಜು ಹಾಗೂ ಹೈಸ್ಕೂಲ್ ಮಟ್ಟದಲ್ಲಿ ಏರ್ಪಡಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಜಿಲ್ಲಾಧಿಕಾರಿಗಳು ಬಹುಮಾನ ವಿತರಣೆ ಮಾಡಿದರು.

ವರದಿ : ರವೀದ್ರ ನಾಯಕ್

ಬದುಕಿಗೆ ನಿಷ್ಠೆ ತೋರಿಸುವ ಕತೆಗಳು

(5ನೇ ಪುಟದಿಂದ)

ದಾಖಲಿಸಿದೆ. ವರ್ಗ ಅಂತರ್ಜಾತೀಯ ಸಮಸ್ಯೆ ಮುದುವೆಗೆ ಅಡ್ಡಿಬರುವ ರೀತಿಯನ್ನು ಸಮರ್ಥವಾಗಿ ರೂಪಿಸುವ ನ್ಯೂಜಿಲೆಂಡಿನ ಕಥೆ 'ಮದುವೆ', ಕೆಲವು ಸಾಧಾರಣ ಕಥೆಗಳೂ ಇವೆ.

ಮೂಲ ಸಂಪತ್ತಿಗೆ ಇಂಗ್ಲೀಷರು ಬಂದು ಲಗ್ಗೆ ಇಟ್ಟಾಗ ಮೂಲ ನಿವಾಸಿಗಳಿಂದ ಪ್ರಾರಂಭವಾಗುವ ಘರ್ಷಣೆ ಇಡೀ ಎರಡು ಶತಮಾನಗಳ ಒಟ್ಟು ಜೀವನದ ದಾಖಲೆ. ಸಾಮ್ರಾಜ್ಯದಾಹಿಗಳಡಿಯಲ್ಲಿ ಸಿಕ್ಕ ದುಡಿಯುವ ಜನತೆಯ ಕಥೆ ಇಡೀ ಪ್ರಪಂಚದ ಯಾವುದೇ ಜನ ಸಮುದಾಯಕ್ಕೂ ರಿಲೆವೆಂಟ್ ಆದುದು. ಈ ಅರ್ಥದಲ್ಲಿಯೇ ಇಲ್ಲಿಯ ಕಥೆಗಳು ಭಾರತಕ್ಕೂ ಹೆಚ್ಚು ರೆಲೆವೆಂಟ್.

ಒಟ್ಟಾರೆ ದುಡಿಯುವ ಜನತೆಯ ಮೂರ್ಕರಾಗಿ ಪ್ರಸ್ತುತ ಸಂಕಲನದ ನಾಯಕ ನಾಯಕಿಯರು ಧ್ವನಿ ನೀಡಿದ್ದಾರೆ. ಕತೆಗಳ ಆಯ್ಕೆ ಮತ್ತು ಅವುಗಳ ಹಿನ್ನೆಲೆಯಾಗಿ ಆಯಾ ದೇಶ ಭಾಷೆಗಳ ಇತಿಹಾಸ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಪ್ರಸ್ತಾವನೆಯಲ್ಲಿ ನೀಡಿರುವ ನಿರಂಜನರ ಸಾಹಸ ನಿಜವಾಗಿಯೂ ಪ್ರಾಮಾಣಿಕವಾದುದು : ಹಿಡಿದಿಡಿದು ಬರುವ ವಾಕ್ಯವೊಂದನ್ನು ಬಿಟ್ಟರೆ, ಇಂತಹ ಯೋಜನೆಯ ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ಒದಗಿಸಿಕೊಡುವ ಇದರ ಪ್ರಧಾನಸಂಪಾದಕರೂ ಶ್ಲಾಘನೀಯರು. ನಮ್ಮ ದೊಡ್ಡದೊಡ್ಡ ಸಾಹಿತಿಗಳ ಆಧ್ಯಾತ್ಮಿಕ ನಿವೃತ್ತಿ ಜೀವನಕ್ಕಿಂತ ಇಂತಹ ಕೆಲಸಗಳು ಸಾವಿರಾರುಪಾಲು ಉತ್ತಮ.

●

ಎಚ್. ಎಸ್. ಸಿ. ಎಲ್. ಕಾರ್ಮಿಕರ ಪ್ರತಿಭಟನೆ

ಕೇಂದ್ರದ ಕಾಂಗ್ರೆ ಸರಕಾರವು ಅಗತ್ಯ ಸೇವೆಗಳಲ್ಲಿ ಮುಷ್ಕರಗಳನ್ನು ನಿಷೇಧಿಸುವ ಅಧಿಕಾರವನ್ನು ಪಡೆದುಕೊಳ್ಳುವ ಸುಗ್ರೀವಾಜ್ಞೆಯನ್ನು ಎಚ್. ಎಸ್. ಸಿ. ಎಲ್. ಕಾರ್ಮಿಕರ ಸಂಘವು ಪ್ರತಿಭಟಿಸಿದೆ. ಸುಗ್ರೀವಾಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳುವಂತೆ ಒತ್ತಾಯಿಸಿ ಪ್ರಧಾನ ಮಂತ್ರಿಗೆ ತಂತಿ ಕಳಿಸಿದೆ. ●

"ರೈತ-ಕೃಷಿಕೂಲಿಗಾರರ ಸಂಘಟಿತ ಚಳುವಳಿಯನ್ನು ಬಲಪಡಿಸಲು ರೈತಸಂಘದ ಕರೆ"

ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯ ಕಾರ್ಯಕಾರಿ ಸಮಿತಿಯು ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪ ಅವರ ಅಧ್ಯಕ್ಷತೆಯಲ್ಲಿ ತಾ. 14-8-81ರಂದು ಬೆಂಗಳೂರಿನಲ್ಲಿ ಸೇರಿತು. ರಾಜ್ಯದಲ್ಲಿನ ರಾಜಕೀಯ ಪರಿಸ್ಥಿತಿ, ರಾಜ್ಯದ ರೈತರು ಮತ್ತು ಹಳ್ಳಿಯ ಬಡಜನತೆಯ ಸಮಸ್ಯೆಗಳು, ಸಂಘಟನಾ ಪರಿಸ್ಥಿತಿ-ಇವೇ ಮೊದಲಾದವುಗಳ ಬಗ್ಗೆ ರಾಜ್ಯದ ಪ್ರಧಾನಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಅವರು ಮಂಡಿಸಿದ ವರದಿಯ ಆಧಾರದಲ್ಲಿ ಚರ್ಚೆ ನಡೆಯಿತು.

ಇತ್ತೀಚೆಗೆ ಕೇಂದ್ರ ಸರಕಾರವು ಹೊರಡಿಸಿರುವ ಅಗತ್ಯ ಸೇವಾ ಸಂರಕ್ಷಣಾ ಸುಗ್ರೀವಾಜ್ಞೆಯು ಕಾರ್ಮಿಕ ವರ್ಗದ ಮೇಲೆ ಮತ್ತು ಎಲ್ಲಾ ದುಡಿಯುವ ಜನತೆಯ ಮೇಲೆ ನಡೆದಿರುವ ನಗ್ನ ದಾಳಿ ಎಂದು ಅಭಿಪ್ರಾಯಪಟ್ಟ ರಾಜ್ಯ ಕಾರ್ಯಕಾರಿ ಸಮಿತಿಯು ಕಾರ್ಮಿಕ ವರ್ಗದೊಂದಿಗೆ ಸೇರಿ ಈ ಕರಾಳ ಶಾಸನವನ್ನು ಪ್ರತಿಭಟಿಸಲು ಕರೆ ಇತ್ತಿತು.

ರಾಜ್ಯದಲ್ಲಿನ ಗುಂಡೂರಾವ್ ನೇತೃತ್ವದ ಕಾಂಗ್ರೆ ಸರಕಾರವು ರೈತರ ಮತ್ತು ಕೃಷಿ-ಕೂಲಿಗಾರ ಹಾಗೂ ಇನ್ನಿತರ ಹಳ್ಳಿಯ ಬಡಜನರ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಮಾತ್ರವಲ್ಲ ಕಾನೂನು ವ್ಯವಸ್ಥೆಗಳನ್ನು ಎತ್ತಿಹಿಡಿಯುವುದರಲ್ಲಿ ವಿಫಲವಾಗಿದೆ. ಆದುದರಿಂದ ಗುಂಡೂರಾವ್ ಸರಕಾರವೇ ರಾಜಿನಾಮೆ ನೀಡಬೇಕು ಎಂದು ರಾಜ್ಯ ರೈತಸಂಘವು ಒತ್ತಾಯಿಸಿತು.

ಭೂಹೀನರಿಗೆ ಕೂಡಲೇ ಭೂಮಿ ಒದಗಿಸಿಕೊಡಬೇಕು ಮತ್ತು ಭೂಹೀನರೂ, ಬಡ ರೈತರೂ ಆಗಮ ಮಾಡಿರುವ ಸರಕಾರಿ ಭೂಮಿಯನ್ನು ಮುಂಘತ್ತಾಗಿ ಅವರಿಗೆ ಕೊಡಬೇಕು ಎಂದು ಕಾರ್ಯಕಾರಿ ಸಮಿತಿಯು ಒತ್ತಾಯಿಸಿತು.

ರಾಜ್ಯದಲ್ಲಿ ಕೃಷಿಕೂಲಿಗಾರರ ವೇತನವು ಅತ್ಯಂತ ಕಡಿಮೆ ಇದ್ದು, ಇಂದಿನ ಬೆಲೆ ಏರಿಕೆ ಸಂದರ್ಭ ಅವರು ಬಹಳ ಕಷ್ಟಕ್ಕೊಳಗಾಗಿರುವರು. ಸರಕಾರವು ಇವರ ಕನಿಷ್ಟ ವೇತನ ಹೆಚ್ಚಿಸಿ ಕಾನೂನು ಮಾಡಲು ಇನ್ನೂ ಹಿಂದು ಮುಂದೆ ನೋಡುತ್ತಿದೆ. ಕೃಷಿಕೂಲಿಗಾರರ ವೇತನವನ್ನು ಈ ಕೂಡಲೇ ಹೆಚ್ಚಿಸುವಂತೆ ಒತ್ತಾಯಿಸಿದ ರಾಜ್ಯ ಸಮಿತಿಯು ರಾಜ್ಯದ ಬೇರೆ ಬೇರೆ ತಾಲ್ಲೂಕುಗಳಲ್ಲಿ ಬಡರೈತ ಮತ್ತು ಕೃಷಿಕೂಲಿಗಾರರ ಸಂಘಟಿತ ಚಳುವಳಿ ನಡೆಸಲೂ ನಿರ್ಣಯಿಸಿತು.

ಕೋಲಾರ ಜಿಲ್ಲೆಯಲ್ಲಿ ಊಜಿನೊಣದ ಹಾವಳಿಯು ಅತ್ಯಂತ ಹೆಚ್ಚಾಗಿದ್ದು, ಇದನ್ನು ಪರಿಣಾಮಕಾರಿಯಾಗಿ ತಡೆಯುವುದಕ್ಕೆ ಸರಕಾರ ಸರಿಯಾದ ಕ್ರಮವಹಿಸದ್ದನ್ನು ತೀವ್ರವಾಗಿ ಖಂಡಿಸಲಾಯಿತು. ಊಜಿ ನೊಣ ಹಾವಳಿ ಬಗ್ಗೆ ಚರ್ಚಿಸಿ, ಮುಂದಿನ ಕ್ರಮವಹಿಸುವಂತೆ ಸರಕಾರವನ್ನು ಒತ್ತಾಯಿಸಲು ಕೋಲಾರ ಜಿಲ್ಲೆಯ ರೇಷ್ಮೆ ಬೆಳೆಗಾರರ ಸಮ್ಮೇಳನವು ಈ ತಿಂಗಳ ಕೊನೆಯಲ್ಲಿ ನಡೆಯುವುದಿದ್ದು. ಅದಕ್ಕೆ ಎಲ್ಲಾ ರೀತಿಯ ಬೆಂಬಲ ಕೊಡಲು ನಿರ್ಣಯಿಸಲಾಯಿತು.

ಉತ್ತರ ಕರ್ನಾಟಕದಲ್ಲಿ ರಾಯಚೂರು ಜಿಲ್ಲೆ, ಬಿಜಾಪುರ ಜಿಲ್ಲೆ, ಮತ್ತಿತರೆಡೆಗಳಲ್ಲಿ ಕಡ್ಡಾಯ ಲೆವಿ ಸಂಗ್ರಹ ನಡೆಸಿ ರೈತರಿಗೆ ಕಿರುಕುಳ ಕೊಡುವುದನ್ನು ಖಂಡಿಸಿದ ರೈತ ಸಂಘವು "ಲೆವಿ ಪದ್ಧತಿಯನ್ನು ಸಂಪೂರ್ಣ ಕೈಬಿಡಬೇಕೆಂದು ಸರಕಾರವನ್ನು ಒತ್ತಾಯಿಸಿತು. "ಲೆವಿ ವಿರೋಧಿ ಚಳುವಳಿ"ಯನ್ನು ರಾಯಚೂರು ಜಿಲ್ಲೆ ಮತ್ತಿತರೆಡೆಗಳಲ್ಲಿ ಸಂಘಟಿಸಲು ಕಾರ್ಯಕಾರಿ ಸಮಿತಿಯು ತೀರ್ಮಾನಿಸಿತು.

ಬರಗಾಲ ಪೀಡಿತ ಪ್ರದೇಶದ ರೈತರು ಮತ್ತು ಕೃಷಿಕೂಲಿಗಾರರ ಸಮಸ್ಯೆಗಳನ್ನು ಚರ್ಚಿಸಿ, ಶಾಶ್ವತ ಪರಿಹಾರ ಕೆಲಸಕ್ಕಾಗಿ ಸರಕಾರವನ್ನು ಒತ್ತಾಯಿಸಲು ಕಾರ್ಯಕ್ರಮ ರೂಪಿಸುವುದಕ್ಕಾಗಿ ಮುಂದಿನ ತಿಂಗಳು ಗುಲ್ಬರ್ಗಾದಲ್ಲಿ ಬರಗಾಲ ಪೀಡಿತ ಪ್ರದೇಶದ ರೈತರು ಮತ್ತು ಕೃಷಿಕೂಲಿಗಾರರ ಪ್ರತಿನಿಧಿ ಸಭೆ ಸೇರಿಸಲು ನಿರ್ಣಯಿಸಲಾಯಿತು.

ಕೃಷ್ಣಾ ಎಡದಂಡೆ ನೀರಾವರಿ ಯೋಜನೆ ಮತ್ತು ನಿಧಾನಗೊಂಡಿರುವ ಅಥವಾ ನಿಲ್ಲಿಸಲ್ಪಟ್ಟಿರುವ ಇತರೆಲ್ಲಾ ನೀರಾವರಿ ಯೋಜನೆಗಳನ್ನು ತುರ್ತಾಗಿ ಕಾರ್ಯಗತಗೊಳಿಸುವಂತೆ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಮಾಡಲಾಯಿತು.

ಸದಸ್ಯತ್ವ ಸೇರಿಸುವುದು, ಜಿಲ್ಲಾ ಮತ್ತು ರಾಜ್ಯ ಸಮ್ಮೇಳನಗಳ ಬಗ್ಗೆ ಚರ್ಚಿಸಿದ ರಾಜ್ಯ ಕಾರ್ಯಕಾರಿ ಸಮಿತಿಯು, ಸಮ್ಮೇಳನದ ದಿನ, ಜಾಗ ಮೊದಲಾದುವುಗಳನ್ನು ಮುಂದಿನ ಸಭೆಯಲ್ಲಿ ನಿರ್ಣಯಿಸಲಾಗುವುದು.

ಹರಿಜನರಿಗೆ ಬಹಿಷ್ಕಾರ

ಯಾಪಲದಿನ್ನಿ ರಾಯಚೂರು ತಾಲ್ಲೂಕಿನ ಒಂದು ಸಣ್ಣ ಹಳ್ಳಿ. ಇಲ್ಲಿ ಸುಮಾರು ಮೂರುನೂರು ಮನೆಗಳಿವೆ. ಅದರಲ್ಲಿ 45 ಹರಿಜನರ ಗುಡಿಸಲುಗಳು. ಹರಿಜನರು ಕೆಲವು ವರ್ಷಗಳಿಂದ ಸರಕಾರಿ ಜಮೀನನ್ನು ಪಡೆದು ಸಾಗುವಳಿ ನಡೆಸುತ್ತಿದ್ದಾರೆ. ಈ ವಿಷಯ ಯಾಪಲದಿನ್ನಿಯ ಸವರ್ಣೀಯರಿಗೆ ಸಹಿಸಲಾಗದ ವಿಷಯವಾಗಿದ್ದು ಹರಿಜನರನ್ನು ಯಾವುದೇ ನೆವದಿಂದ ತುಳಿಯಲು ಸಮಯ ಕಾಯುತ್ತಿದ್ದರು.

ಇತ್ತೀಚೆಗೆ ಪಂಚಾಯತ್ ಚುನಾವಣೆ ನಡೆಯಿತು. ಹರಿಜನ ಸದಸ್ಯನೊಬ್ಬನು ಚೇರ್‌ಮನ್ ಸ್ಥಾನಕ್ಕೆ ಸ್ಪರ್ಧಿಸಿದ್ದ. ವೆಂಕಣ್ಣ ಎಂಬ ಸಾಹುಕಾರನಿಗೆ ಮತಕೊಡದೇ ಇನ್ನೊಬ್ಬ ಮುಸ್ಲಿಂ ಅಭ್ಯರ್ಥಿಗೆ ಮತ ಚಲಾಯಿಸಿದನು. ಹರಿಜನರಿಗೆ ಪಾಠಕಲಿಸಲು ನಿರ್ಧರಿಸಿದ ವೆಂಕಣ್ಣ, ಗ್ರಾಮದ ಕೆರೆಯ ಪಕ್ಕದಲ್ಲಿರುವ ಹರಿಜನರ ಜಮೀನನ್ನು ಆಕ್ರಮಿಸಲು ಸವರ್ಣೀಯರನ್ನು ಪ್ರಚೋದಿಸಿದನು. ಪ್ರಚೋದಿತ ಸವರ್ಣೀಯರು ಜಮೀನನ್ನು ಆಕ್ರಮಿಸಲು ಹವಣಿಸಿದರು. ಹರಿಜನರು ಪ್ರತಿಭಟಿಸಿದರು. ಹರಿಜನರಿಗೆ ಕೆಲಸನೀಡಬಾರದೆಂಬ ಡಂಗುರವನ್ನು ಊರಲ್ಲಿ ಹಾಕಿಸಲಾಯಿತು.

ಎದೆಗುಂದಿದ ಹರಿಜನರು ಜಿಲ್ಲಾಧಿಕಾರಿಗೆ ರಕ್ಷಣೆಗಾಗಿ ಪ್ರಾರ್ಥಿಸಿದರು. ಜಿಲ್ಲಾಧಿಕಾರಿ, ಪೋಲೀಸ್ ಅಧಿಕಾರಿ ಇವರೆಲ್ಲ ಸ್ಥಳಕ್ಕೆ ಭೇಟಿ ನೀಡಿ ಹರಿಜನರಿಗೆ ರಕ್ಷಣೆಯ ಆಶ್ವಾಸನೆಯಿತ್ತರು. ಆದರೆ ಈ ಆಶ್ವಾಸನೆ ಕಾರ್ಯಗತವಾಗಿಲ್ಲ. ಜಮೀನಿನ ಕಾರ್ಯನಿರ್ವಹಿಸಲು ಧೈರ್ಯವಿಲ್ಲದಾಗಿದೆ. ಭಯದ ವಾತಾವರಣದಲ್ಲಿ ಜೀವ ಕೈಯಲ್ಲಿ ಹಿಡಿದು ಬದುಕುತ್ತಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಚಂದ್ರಶೇಖರಬಾಳೆಯವರು ಸ್ಥಳಕ್ಕೆ ಭೇಟಿನೀಡಿ ಹರಿಜನರಿಗೆ ಧೈರ್ಯ ತುಂಬಿದ್ದಾರೆ. ಈ ಕುರಿತು ಜಿಲ್ಲಾಧಿಕಾರಿಗೆ ಮನವಿಯನ್ನರ್ಪಿಸಿ ಕ್ರಮತೆಗೆದುಕೊಳ್ಳಲು ಒತ್ತಾಯಿಸಲಾಗಿದೆ. ರಾಯಚೂರಿನಲ್ಲಿನ ಪ್ರಜಾಪ್ರಭುತ್ವವಾದಿ ಸಂಘ ಸಂಸ್ಥೆಗಳಿಗೆ ರಾಜಕೀಯ ಪಕ್ಷಗಳಿಗೆ ಹರಿಜನರಿಗೆ ರಕ್ಷಣೆ ಕೊಡುವಂತೆ ಕಾಂ. ಬಾಳೆ ವಿನಂತಿಸಿಕೊಂಡಿದ್ದಾರೆ.

●

ಕೆ.ಜಿ. ಫಣಿಕ್ಕರರ ನಿಧನ

ದೀರ್ಘ ಕಾಲದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದಮುನಿಸಿಪಲ್ ಕೌನ್ಸಿಲರ್ ಆಗಿದ್ದು ಮಂಗಳೂರಿನಲ್ಲಿ ಕೆಲಸಮಾಡುತ್ತಾ ಬಂದ, ಇತ್ತೀಚೆಗೆ ಅನಾರೋಗ್ಯದಿಂದ ಬಳಲುತ್ತಿದ್ದ ಡಾ॥ ಕೆ. ಜಿ. ಫಣಿಕ್ಕರರು 30-7-81 ರಂದು ನಿಧನರಾದರು. ಡಾ॥ ಫಣಿಕ್ಕರರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸಂತಾಪ ವ್ಯಕ್ತಪಡಿಸುತ್ತದೆ.

○

ಹಲ್ಲೆಯ ಪ್ರತಿಭಟನೆ

ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ವಿಜಯನಗರ ಜನಪ್ರಿಯ ಪ್ರಾಧ್ಯಾಪಕರನ್ನು ದುರುದ್ದೇಶಪೂರ್ವಕ ವರ್ಗಾವಣೆ ಮಾಡಿದ್ದನ್ನು ಪ್ರತಿಭಟಿಸಿದ ವಿದ್ಯಾರ್ಥಿ ನಾಯಕರನ್ನು ಪೋಲೀಸರು ಅಮಾನುಷವಾಗಿ ಥಳಿಸಿದ್ದನ್ನು ಪ್ರತಿಭಟಿಸಿ ಎಲ್ಲೆಡೆಗಳಿಂದ ವರದಿ ಬಂದಿವೆ.

ಬೆಂಗಳೂರು

ನಗರದ ವಿವಿಧ ಕಾಲೇಜುಗಳ ಪ್ರತಿನಿಧಿಗಳು ಮತ್ತು ಯುವಜನರ ನಿಯೋಗವೊಂದು ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ.ಗಳ ನೇತೃತ್ವದಲ್ಲಿ 18-8-81ರಂದು ಐ. ಜಿ. ಪಿ. ಆಫೀಸೆದುರು ಮತ್ತು ರಾಜಭವನದೆದುರು ಮತಪ್ರದರ್ಶನ ವ್ಯವಸ್ಥೆಮಾಡಿತ್ತು. ಹೊಸಪೇಟೆಯ ಡಿ. ವೈ. ಎಸ್. ಪಿ.ಯನ್ನು ತಕ್ಷಣ ಸಸ್ಪೆಂಡ್‌ಮಾಡಿ ಪ್ರಕರಣ ತನಿಖೆ ಮಾಡುವಂತೆ ಒತ್ತಾಯಿಸಿ ಐ.ಜಿ.ಪಿ.ಯವರಿಗೆ ಮತ್ತು ರಾಜ್ಯಪಾಲರಿಗೆ ಮನವಿ ಅರ್ಪಿಸಲಾಯಿತು. ರಾಜಭವನದ ಬಳಿ ಪ್ರದರ್ಶನಕಾರರನ್ನುದ್ದೇಶಿಸಿ ಎಸ್. ಎಫ್. ಐ.ನ ಕಾಂ. ರಾಜಣ್ಣ. ಎಸ್. ಆರ್. ಆರಾಧ್ಯ, ಎ. ಐ. ಎಸ್. ಎಫ್.ನ ಕಾಂ. ಸಿದ್ಧಲಿಂಗಸ್ವಾಮಿ ಮತ್ತು ಯುವಜನ ಸಂಘಟನೆಯ ಕಾಂ. ಶಿವರಾಂ ಮಾತನಾಡಿದರು.

ಮಂಗಳೂರು

13-8-81ರಂದು ಮಂಗಳೂರಿನಲ್ಲಿ ವಿದ್ಯಾರ್ಥಿಗಳು ಎಸ್. ಎಫ್. ಐ. ನೇತೃತ್ವದಲ್ಲಿ ಜಿಲ್ಲಾಧಿಕಾರಿಯ ಆಫೀಸೆದುರು ಪೋಲೀಸ್ ದೌರ್ಜನ್ಯ ಪ್ರತಿಭಟಿಸಿ ಮತಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಗಂಗಾವತಿ

5-8-81ರಂದು ಗಂಗಾವತಿಯ ಎಸ್. ಎಫ್. ಐ. ಘಟಕದ ನೇತೃತ್ವದಲ್ಲಿ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳನ್ನು ಬಂದ್‌ಮಾಡಿ, ಮೆರವಣಿಗೆ ತೆಗೆದು ತಹಸೀಲ್ದಾರರಿಗೆ ಮನವಿ ಅರ್ಪಿಸಿದರು.

ರಾಯಚೂರು

ಹೊಸಪೇಟೆಯಲ್ಲಿ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸಿ ರಾಯಚೂರಿನ ಎಸ್. ಎಫ್. ಐ. ಘಟಕವು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ ವಿಚಾರಣೆಗೆ ಒತ್ತಾಯಿಸಿತು.

ಕುಂದಾಪುರ

13-8-81ರಂದು ದ.ಕ. ಜಿಲ್ಲೆಯ ಕುಂದಾಪುರದಲ್ಲಿ ಪೋಲೀಸ್ ದೌರ್ಜನ್ಯ ಖಂಡಿಸಿ ಪ್ರತಿಭಟನಾ ಸಭೆ ಜರುಗಿತು.

ಈ ಕುರಿತು ಹೊರಡಿಸಿದ ಕರಪತ್ರವನ್ನು ಶಾಲೆ-ಕಾಲೇಜುಗಳಲ್ಲಿ ಹಂಚಲಾಯಿತು.

ಸಭೆಯನ್ನುದ್ದೇಶಿಸಿ ಕಾಂ. ಕೆ. ವಿಶ್ವನಾಥ, ರತ್ನಾಕರನ್, ಶಿವರಾಮ, ಶಿವಾನಂದಕೋಡಿ, ಕಾಂ. ವಿ. ಮಹಾಬಲದೇವಾಡಿಗರು ಮಾತನಾಡಿ ಹೊಸಪೇಟೆಯ ಡಿ. ವೈ. ಎಸ್. ಪಿ. ಯನ್ನು ವಜಾಮಾಡಲು ಒತ್ತಾಯಿಸಿದರು.

ಸವದತ್ತಿ

ಬೆಳಗಾವಿ ಜಿಲ್ಲೆಯ ಸವದತ್ತಿಯ ಎಸ್. ಎಫ್. ಐ. ಘಟಕದ ಸರ್ವಸದಸ್ಯರ ಸಭೆ ನಡೆದು ಹೊಸಪೇಟೆಯಲ್ಲಿ ವಿದ್ಯಾರ್ಥಿನಾಯಕರ ಮೇಲೆ ನಡೆದ ದೌರ್ಜನ್ಯವನ್ನು ಉಗ್ರವಾಗಿ ಖಂಡಿಸಲಾಯಿತು. ಈ ಕುರಿತು ಮುಖ್ಯಮಂತ್ರಿ ಮತ್ತು ಐ.ಜಿ.ಪಿ.ಗೆ ತಂತಿ ಕಳುಹಿಸಿ ಕ್ರಮತೆಗೆದುಕೊಳ್ಳಲು ಒತ್ತಾಯಿಸಲಾಯಿತು.

●

ಸವದತ್ತಿ ಎಸ್.ಎಫ್.ಐ. ಘಟಕದ ನೂತನ ಪದಾಧಿಕಾರಿಗಳ ಆಯ್ಕೆ

ದಿನಾಂಕ 10-8-81ರಂದು ಸವದತ್ತಿ ಎಸ್. ಎಫ್. ಐ. ಘಟಕವು ತನ್ನ ಸರ್ವಸದಸ್ಯರ ಸಭೆಯಲ್ಲಿ ತನ್ನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು. ಕಾಂ. ಬಸವರಾಜ ಎಸ್. ಶಿಂತ್ರಿ ಇವರು ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು. ಇವರು ಕಳೆದವಾರ ನಡೆದ ಕಾಲೇಜು ಚುನಾವಣೆಯಲ್ಲಿ ಸ್ಥಳೀಯ ಎಸ್. ವಿ. ಎಸ್. ಬಿ. ಕಾಲೇಜಿನ ಜನರಲ್ ಸೆಕ್ರೆಟರಿಯಾಗಿಯೂ ಆಯ್ಕೆಯಾಗಿದ್ದಾರೆ. ಮೂರು ಉಪಾಧ್ಯಕ್ಷರುಗಳ ಸ್ಥಾನಗಳಿಗೆ ಅನುಕ್ರಮವಾಗಿ ಸುರೇಶ ಕೆ. ಮಟಗುಡಿ, ಕುಮಾರಿ ಜಿ.ಎಂ. ನರೇಗಲ್ ಹಾಗೂ ರಮೇಶ್ ಎನ್. ನವಲೆ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿಯಾಗಿ ಲಿಂಗರಾಜ ಆರ್. ಅಂಗಡಿ ಜೊತೆ ಕಾರ್ಯದರ್ಶಿಯಾಗಿ ಬಿ. ಎನ್. ಕಳ್ಳಿಮನಿ ಮತ್ತು ಕೋಶಾಧಿಕಾರಿಯಾಗಿ ವೆಂಕಟೇಶ್ ಎಸ್. ವೈದ್ಯ ಇವರು ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿಗೆ ಕಾಲೇಜು ಹಾಗೂ ಹೈಸ್ಕೂಲುಗಳ ಪ್ರತಿಯೊಂದು ವರ್ಗವನ್ನೂ ಪ್ರತಿನಿಧಿಸುವಂತೆ ಹದಿನೇಳು ಸದಸ್ಯರನ್ನು ಆಯ್ಕೆಮಾಡಲಾಯಿತು. ಕಾಂ.ವಿ.ಸಿ. ಕೊಡ್ಲಿಮಠ, ಆರ್.ಎಂ. ಶಿರಸಂಗಿ ಹಾಗೂಕುಮಾರಿ ಸುನಂದ ವಿ. ವೈದ್ಯ ಇವರು ಕಾರ್ಯಕಾರಿ ಸಮಿತಿಯಲ್ಲಿ ಸಲಹೆದಾರರಾಗಿ ಮುಂದುವರಿಯಬೇಕೆಂದು ನಿರ್ಣಯಿಸಲಾಯಿತು. ಸ್ಥಳೀಯ ಜ್ಞಾನಕಿರಣ ಸಂಸ್ಥೆಯ ಶ್ರೀ ಸ್ವಾಮಿ ನಿತ್ಯಾನಂದಜಿಯವರು ಸಭೆಗೆ ಮಾರ್ಗದರ್ಶನ ನೀಡಿ ಹೊಸ ಪದಾಧಿಕಾರಿಗಳಿಂದ ಪ್ರತಿಜ್ಞಾವಿಧಿಯನ್ನು ನೆರವೇರಿಸಿದರು.

○

ಮತ ಪ್ರದರ್ಶನ

ಕೋಲಾರ ಜಿಲ್ಲಾ ಮಾಲೂರಿನ ಹಿಂದುಳಿದ ವಿದ್ಯಾರ್ಥಿಗಳ ಹಾಸ್ಟೆಲ್‌ನಲ್ಲಿ ಅನಾರೋಗ್ಯಕರವಾದ ಊಟದ ವ್ಯವಸ್ಥೆಯಿಂದಾಗಿ ವಿದ್ಯಾರ್ಥಿಗಳ ಪಾಡು ಶೋಚನೀಯವಾಗಿದೆ.

ಈ ಅವ್ಯವಸ್ಥೆ ಪ್ರತಿಭಟಿಸಿ 12-8-81ರಂದು ಮಾಲೂರಿನ ಸರಕಾರಿ ಜೂನಿಯರ್ ಕಾಲೇಜಿನ ವಿದ್ಯಾರ್ಥಿಗಳು ಎಸ್. ಎಫ್. ಐ.ನ ಮಾಲೂರು ಸಂಘಟನಾ ಸಂಚಾಲಕ ಕಾಂ. ಮುತ್ತುರಾಜ್ ಹಾಗೂ ರಾಜ್ಯ ಸಮಿತಿಯ ಉಪಾಧ್ಯಕ್ಷ ಕಾಂ. ಎನ್. ರಾಜಣ್ಣನವರ ನಾಯಕತ್ವದಲ್ಲಿ ಮೆರವಣಿಗೆ ತೆಗೆದು ತಹಸೀಲ್ದಾರರ ಮತ್ತು ಬಿ. ಡಿ. ಓ. ಕಚೇರಿಗಳೆದುರು ಮತಪ್ರದರ್ಶನ ನಡೆಸಿದರು. ಕಾಂ. ಮುತ್ತುರಾಜರು ಬಿ. ಡಿ. ಓ. ಆಫೀಸೆದುರು ಉಪವಾಸ ಸತ್ಯಾಗ್ರಹಪ್ರಾರಂಭಿಸಿದರು.

ನಂತರ ಸ್ಥಳೀಯ ಶಾಸಕರು, ಟಿ. ಡಿ. ಬಿ. ಅಧ್ಯಕ್ಷರು ವಿದ್ಯಾರ್ಥಿ ನಾಯಕರನ್ನು ಮಾತುಕತೆಗೆ ಆಹ್ವಾನಿಸಿ ಕೂಲಂಕುಷ ಚರ್ಚೆ ನಡೆಸಿದರು. ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸುವ ಆಶ್ವಾಸನೆ ನೀಡಿದರು. ಉಪವಾಸ ಸತ್ಯಾಗ್ರಹವನ್ನು ವಾಪಸ್ ತೆಗೆದುಕೊಳ್ಳಲಾಯಿತು. ಸಹಕರಿಸಿದ ವಿದ್ಯಾರ್ಥಿಗಳಿಗೆ ಸ್ಥಳೀಯ ಎಸ್. ಎಫ್. ಐ. ಸಮಿತಿ ಕೃತಜ್ಞತೆ ಸಲ್ಲಿಸಿದೆ.

●

ರೈತಸಂಘದ ಕಚೇರಿ ಉದ್ಘಾಟನೆ

10-8-81ರಂದು ಬಿಜಾಪುರದ ಇಂಡಿರೋಡಿನಲ್ಲಿ ನೂತನ ರೈತಸಂಘ ಕಚೇರಿಯನ್ನು ಉದ್ಘಾಟಿಸಲಾಯಿತು. ಉದ್ಘಾಟನೆಯನ್ನು ರೈತಮುಖಂಡ ಕಾಂ. ವಿ. ಎನ್. ಹಳಕಟ್ಟಿಯವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಕಾಂ. ಎನ್. ಕೆ. ಉಪಾಧ್ಯಾಯರು ವಹಿಸಿದ್ದರು. ಪ್ರಾರಂಭದಲ್ಲಿ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಭೀಮಸಿ ಕಲಾದಗಿಯವರು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಎಂ. ಐ. ಪಾಟೀಲರು ರೈತಸಂಘದ ಚಟುವಟಿಕೆಯ ವರದಿ ಸಲ್ಲಿಸಿದರು.

ಸಭೆಯ ಪ್ರಾರಂಭದಲ್ಲಿ ಇತ್ತೀಚೆಗೆ ನಿಧನರಾದ ಸಿ. ಪಿ. ಐ. ಮುಖಂಡ ಕಾಂ.ಭೂಪೇಶ್‌ಗುಪ್ತ ಮತ್ತು ಸಾಹಿತಿ ವೆಂಕಟರಾವ್ ಪಾನಸೆಯವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ಮುಷ್ಕರ ನಿಷೇಧಿಸುವ ರಾಷ್ಟ್ರಪತಿಯವರ ಸುಗ್ರೀವಾಜ್ಞೆಯನ್ನು ಖಂಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಸುಬ್ರಮಣ್ಯ ಭಾರತಿಯವರ ಜನ್ಮಶತಾಬ್ಧಿ ಆಚರಣೆ

15-8-81 ರಂದು ಬೆಂಗಳೂರು ತಮಿಳು ಸಂಘದ ಆವರಣದಲ್ಲಿ ಪ್ರಗತಿಪರ ವಿಚಾರವಂತರ ಸಂಘದ ಆಶ್ರಯದಲ್ಲಿ ಕವಿಸುಬ್ರಮಣ್ಯ ಭಾರತಿಯವರ ಜನ್ಮಶತಾಬ್ಧಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕವಿಗೋಷ್ಠಿಯೊಂದನ್ನು ಏರ್ಪಡಿಸಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಎಸ್. ಪಿ. ರಾಜಗೋಪಾಲ್ ವಹಿಸಿದ್ದರು. "ಕವಿ ಪರಂಪರೆ" ಕುರಿತು ಡಾ॥ ಇಳಾಂಗೋರವರು ಮಾತನಾಡಿದರು.

ಕವಿಗೋಷ್ಠಿಯಲ್ಲಿ ಪಂಡಿತ್, ಕಿಲಾರ್, ಸುಂದರರಾಮನ್, ವೀರಕರ್ಪಯ್ಯ, ನಾವರಸನ್, ಮರುದು, ಪಂಡಿತ್ ವೀರಮಣಿ, ಪಾಮರನ್ ಮೊದಲಾದವರು ಪಾಲ್ಗೊಂಡಿದ್ದರು.

ಸುಬ್ರಮಣ್ಯಭಾರತಿಯವರ ಜನ್ಮಶತಾಬ್ಧಿ ಅಂಗವಾಗಿ ಈ ವರ್ಷ ಕವಿಗೋಷ್ಠಿ, ವಿಚಾರಗೋಷ್ಠಿ, ಚಿತ್ರಕಲಾ ಪ್ರದರ್ಶನ ಮತ್ತು ನಾಟಕೋತ್ಸವ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಬೇಕೆಂದೂ, ಈ ಕುರಿತು ಕಾರ್ಯಕ್ರಮ ರೂಪಿಸಲು ಕಾಂ. ಪಿ.ಕೆ. ಸುಬ್ರಮಣಿ, ಕೋದಂಡರಾಮ್ ಮತ್ತು ಸದಾಶಿವ ಈ ಮೂವರು ಸಂಚಾಲಕರಾಗಿರುವ ಸಮಿತಿಯೊಂದನ್ನು ನೇಮಿಸಲಾಗಿದೆ.

●

ಮುಷ್ಕರ ನಿಷೇಧ ಅಧ್ಯಾದೇಶ

(1ನೇ ಪುಟದಿಂದ)

ಜುಲ್ಮಾನೆ ವಿಧಿಸಬಹುದು. 6 ತಿಂಗಳಿನಿಂದ 12 ತಿಂಗಳವರೆಗೆ ಸೆರೆಮನೆಯಲ್ಲಿಡಬಹುದು. ಸರಕಾರ ನಿಷೇಧಿಸುವ ಮುಷ್ಕರ ನ್ಯಾಯಯುತವಾಗಿದೆ ಎಂದು ಪತ್ರಿಕೆಗಳು ಪ್ರತಿಪಾದಿಸಿದರೂ ಶಿಕ್ಷೆಗೊಳಗಾಗಬೇಕಾದೀತು!

ಸಾಮೂಹಿಕ ಚೌಕಾಸಿ ಹಕ್ಕು ಇಲ್ಲ

ಪರಿಣಾಮವಾಗಿ, ಕೇಂದ್ರ ಹಾಗೂ ರಾಜ್ಯಸರಕಾರಗಳ ಮತ್ತು ಸಾರ್ವಜನಿಕ ಹಾಗೂ ಖಾಸಗೀ ಕ್ಷೇತ್ರಗಳ ಕೈಗಾರಿಕೋದ್ಯಮಗಳ ಒಟ್ಟು ಸುಮಾರು 2 ಕೋಟಿ ಕಾರ್ಮಿಕರೂ ನೌಕರರೂ, ಅವರ ಪರವಾಗಿರಬಹುದಾದ ಅವರ ಕುಟುಂಬಗಳ ಸುಮಾರು 10 ಕೋಟಿ ಸದಸ್ಯರೂ, ಅವರನ್ನು ಬೆಂಬಲಿಸಬಹುದಾದ ಅಸಂಖ್ಯಾತ ರಾಜಕೀಯ ಧುರೀಣರೂ, ಪತ್ರಿಕಾಕರ್ತರೂ, ಬುದ್ಧಿಜೀವಿಗಳೂ, ಮಹಿಳೆಯರ ಮತ್ತು ವಿದ್ಯಾರ್ಥಿ-ಯುವಜನರ ಸಂಘಗಳ ಕಾರ್ಯಕರ್ತರೂ ತಮ್ಮ ಸಂಘಟನಾ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ವೃತ್ತಿಸ್ವಾತಂತ್ರ್ಯಗಳನ್ನು ಕಳೆದುಕೊಳ್ಳುವರು!

ಸಂಘಟಿತ ಕಾರ್ಮಿಕರು ತಮ್ಮ ಸಾಮೂಹಿಕಚೌಕಾಸಿ(collective bargaining) ಹಕ್ಕನ್ನು ಕಳೆದುಕೊಳ್ಳುವರು. ಮುಷ್ಕರದ ಹಕ್ಕು ಇಲ್ಲದ ಮೇಲೆ ಸಾಮೂಹಿಕ ಚೌಕಾಸಿ ಹಕ್ಕನ್ನು ಯಾರು ಗೌರವಿಸುತ್ತಾರೆ? ಹಲವು ದಶಕಗಳ ಹೋರಾಟಗಳಿಂದ ತ್ಯಾಗ ಬಲಿದಾನಗಳಿಂದ ಗಳಿಸಿದ, ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ. ಎಲ್. ಒ.) ಗೌರವಿಸಿದ, ಭಾರತದ ಸಂವಿಧಾನದಲ್ಲಿಯೂ ಸ್ಪಷ್ಟವಾಗಿ ಆಶ್ವಾಸಿಸಿರುವ ಸಂಘಟನಾ ಸ್ವಾತಂತ್ರ್ಯ, ಸಾಮೂಹಿಕ ಚೌಕಾಸಿ ಹಕ್ಕು, ವಾಕ್ ಸ್ವಾತಂತ್ರ್ಯ, ಇತ್ಯಾದಿ ಮೂಲಭೂತ ಹಕ್ಕುಗಳನ್ನು ಇಂದಿರಾಗಾಂಧಿ ಸರಕಾರ ದೇಶದ ಕಾರ್ಮಿಕಕೋಟಿಗೆ ಕ್ಷಣಾರ್ಧದಲ್ಲಿ ನಿರಾಕರಿಸಿದೆ!

ಪ್ರತಿಭಟನೆ

ಪ್ರತಿ ಪಕ್ಷಗಳೂ, ಕಾರ್ಮಿಕ ಸಂಘಟನೆಗಳೂ, ಹೆಚ್ಚಿನ ರಾಷ್ಟ್ರೀಯ ಪತ್ರಿಕೆಗಳೂ ಈ ಅಧ್ಯಾದೇಶವನ್ನು ಕರಾಳ, ಅಮಾನುಷ, ನಿರಂಕುಶ, ಸರ್ವಾಧಿಕಾರಿ, ದಮನಕಾರಿ, ನಿರ್ದಯ, ಎಂದು ಒಕ್ಕೊರಲಿನಿಂದ ಪ್ರತಿಭಟಿಸಿವೆ. ಬ್ರಿಟಿಷರ ಆಳ್ವಿಕೆಯಲ್ಲಿಯೂ ಇಷ್ಟು ವ್ಯಾಪಕವಾಗಿ ಮುಷ್ಕರಗಳನ್ನು ನಿಷೇಧಿಸುವ ಶಾಸನ ಇರಲಿಲ್ಲ. ದೇಶಾದ್ಯಂತ ಅಧ್ಯಾದೇಶದ ವಿರುದ್ಧ ಪ್ರತಿಭಟನೆಗಳು ಭುಗಿಲೇಳುತ್ತಿವೆ. ಸಂಸತ್ತು ಪ್ರಾರಂಭವಾಗುವ ದಿನ, ಆಗಸ್ಟ್ 17ರಂದು ದೇಶಾದ್ಯಂತ ಈ ಕರಾಳ ಶಾಸನದ ವಿರುದ್ಧ 'ಕಪ್ಪು ದಿನಾಚರಣೆ' ನಡೆದಿದೆ.

ಸ್ವಾಗತ, ಅಭಿನಂದನೆ

ಈ ಮಧ್ಯೆ ಗುತ್ತೇದಾರಿ ಕೈಗಾರಿಕೋದ್ಯಮಿಗಳು ಈ ಅಧ್ಯಾದೇಶವನ್ನು ಸಕಾಲಿಕ, ಅತ್ಯಗತ್ಯ, ಅನಿವಾರ್ಯ, ಧೈರ್ಯದ ಹೆಜ್ಜೆ, ದೃಢ ನಿರ್ಧಾರ, ಜನಹಿತ, ತಡವಾದರೂ ಮೊದಲ ದಿಟ್ಟಹೆಜ್ಜೆ, ಎಂದು ಹಾಡಿ ಹೊಗಳಿದ್ದಾರೆ. ಪ್ರಧಾನಿ ಇಂದಿರಾಗಾಂಧಿಯನ್ನು ಮುಕ್ತಕಂಠದಿಂದ ಅಭಿನಂದಿಸಿದ್ದಾರೆ! ಈ ಅಧ್ಯಾದೇಶದಿಂದ ಕಾರ್ಮಿಕ ಶಾಂತಿ ನೆಲೆಸಿ, ಉತ್ಪಾದನೆ ಹೆಚ್ಚಿ, ಕೊರತೆ ಪರಿಸ್ಥಿತಿಹೋಗಿ, ಸರಬರಾಜು, ಸುಧಾರಿಸಿ, ಬೆಲೆಏರಿಕೆ ಹಣದುಬ್ಬರ ಕಡಿಮೆಯಾಗಿ, ರಫ್ತು ಹೆಚ್ಚಿ, ಆರ್ಥಿಕ ದುಃಸ್ಥಿತಿ ನಿವಾರಣೆಯಾಗುವುದೆಂದು ನಿರೀಕ್ಷಿಸಿದ್ದಾರೆ. ಪ್ರಧಾನಿ ಇಂದಿರಾಗಾಂಧಿ ಮತ್ತು ಅವರ ಮಂತ್ರಿ ಮಾಗಧರೂ ಇದೇ ವಾದವನ್ನು ಪ್ರಚಾರ ಮಾಡುತ್ತಿದ್ದಾರೆ. 1975ರಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಘೋಷಿಸಿದಾಗ ಬಿರ್ಲಾನ ನೇತೃತ್ವದಲ್ಲಿ ಗುತ್ತೇದಾರಿ ಕೈಗಾರಿಕೋದ್ಯಮಿಗಳು ಪ್ರಧಾನಿ ಇಂದಿರಾಗಾಂಧಿಯ ನಿವಾಸದವರೆಗೆ ಸಂಭ್ರಮದ ಮೆರವಣಿಗೆಯಲ್ಲಿ ಹೋಗಿ ಹಾಡಿ ಹೊಗಳಿದ್ದು ನಮ್ಮ ನೆನಪಿನಲ್ಲಿ ಇನ್ನೂ ಇದೆ. 1981ರಲ್ಲಿ ಪುನಃ ಕಾರ್ಮಿಕರಿಗೆ ಮರಣ ಪ್ರಾಯವಾದ ಪ್ರಜಾಸತ್ತೆಗೆ ಕಂಟಕವಾದ ಈ ಕರಾಳ ಶಾಸನವನ್ನು ದೇಶದ ಸ್ಥಾಪಿತ ಹಿತಾಸಕ್ತಿಗಳು ಸ್ವಾಗತಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ದೇಶದ ಗುತ್ತೇದಾರಿ ಬಂಡವಾಳಶಾಹಿಗಳೊಂದಿಗೇ ವಿದೇಶಿ ಬಂಡವಾಳಶಾಹಿಗಳೂ ಈ ಕರಾಳ ಮಸೂದೆಯನ್ನು ಸ್ವಾಗತಿಸಿದ್ದಾರೆ. ಭಾರತ ಬೃಹತ್ ಪ್ರಮಾಣದಲ್ಲಿ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಮತ್ತು ಜಾಗತಿಕ ಬ್ಯಾಂಕಿನಿಂದ ಸಾಲ ಪಡೆಯಲಿದೆ. ಮುಷ್ಕರ ನಿಷೇಧ ಅಧ್ಯಾದೇಶವು ವಿದೇಶಿ ಸಾಲ ಪಡೆಯಲು ಪೂರ್ವಭಾವಿ ಕ್ರಮವಾಗಿರಬಹುದು.

ಮುಷ್ಕರ-ಉತ್ಪಾದನೆ

ಮುಷ್ಕರ ನಿಷೇಧ ಅಧ್ಯಾದೇಶದ ನಿಜವಾದ ಉದ್ದೇಶಗಳೇನು?

ಇತ್ತೀಚೆಗೆ ಮುಷ್ಕರಗಳು ಹೆಚ್ಚುತ್ತಿವೆ ಎನ್ನುವುದು ಸತ್ಯಕ್ಕೆ ದೂರ. ಸರಕಾರದ ಅಧಿಕೃತ ಅಂಕೆಸಂಖ್ಯೆಗಳಂತೆ, ಇತ್ತೀಚೆಗೆ ಮುಷ್ಕರಗಳು ಇಳಿಮುಖವಾಗಿವೆ, 1978: 2117, 1979 : 1736, 1980 : 899, 1981 (ಮಾರ್ಚ್‌ವರೆಗೆ) : 255.

ಮುಷ್ಕರ ನಿಷೇಧಿಸಿದರೆ, ಉತ್ಪಾದನೆ ಹೆಚ್ಚುವುದು, ಕೊರತೆ ಪರಿಸ್ಥಿತಿ ಹೋಗುವುದು, ಬೆಲೆ ಏರಿಕೆ ಹಣದುಬ್ಬರ ಕಡಿಮೆಯಾಗುವುದು, ಇತ್ಯಾದಿ ನಿರೀಕ್ಷೆಗಳು ಇದುಂತನಕ ಮುಖ್ಯವಾಗಿ 1975-77ರ ತುರ್ತು ಪರಿಸ್ಥಿತಿಯ ಅನುಭವದಿಂದ ಸುಳ್ಳಾಗಿದೆ. ಉತ್ಪಾದನೆ ಹೆಚ್ಚಾದರೂ ಜೀವನಾವಶ್ಯಕ ವಸ್ತುಗಳ ಉತ್ಪಾದನೆಯೇ ಅಥವಾ ಶ್ರೀಮಂತ ವರ್ಗಕ್ಕೆ ಹಾಗೂ ವಿದೇಶಗಳಿಗೆ ಬೇಕಾಗುವ ವಸ್ತುಗಳ ಉತ್ಪಾದನೆಯೇ ಎಂಬ ನಿಗದಿಯಿಲ್ಲ. ಜೀವನಾವಶ್ಯಕ ವಸ್ತುಗಳ ಉತ್ಪಾದನೆ ಹೆಚ್ಚಾದರೂ ಅವುಗಳು ಜನಸಾಮಾನ್ಯರಿಗೆ ಸಮರ್ಪಕವಾಗಿ ವಿತರಣೆಯಾಗುವುವು ಎಂಬ ಭರವಸೆ ಇಲ್ಲ. ಅದಕ್ಕಾಗಿ ಹೋರಾಟದ ಹಾದಿ ಹಿಡಿಯುವುದು ಅನಿವಾರ್ಯವಾಗಬಹುದು.

ವೇತನ-ಬೆಲೆ ಏರಿಕೆ

ಉತ್ಪಾದನೆಯ ಸ್ಥಗಿತಕ್ಕೆ, ವಿತರಣಾ ಅವ್ಯವಸ್ಥೆಗೆ ಹಲವಾರು ಕಾರಣಗಳಿರಬಹುದು. ಕಾರ್ಮಿಕರ ಮುಷ್ಕರಗಳು ಇದಕ್ಕೆ ಕಾರಣವಲ್ಲ ಎಂದು ಇತ್ತೀಚೆಗೆ ಇಂಡಿಯನ್ ಇನ್‌ಸ್ಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನ ತಜ್ಞ ವರದಿ ಒಂದು ಸ್ಪಷ್ಟಪಡಿಸಿದೆ (ಇಂಡಿಯನ್ ಎಕ್ಸ್‌ಪ್ರೆಸ್ : 17-8-81), ಇದೇ ವರದಿಯಲ್ಲಿ ಕಾರ್ಮಿಕರ ನೌಕರರ ವೇತನ ಹೆಚ್ಚಳದಿಂದ ಬೆಲೆ ಏರುತ್ತಿದೆ ಎಂಬ ವಾದವನ್ನು 1970-79ರ ದೀರ್ಘಾವಧಿಯ ಅಧ್ಯಯನದಿಂದ ಅಲ್ಲಗಳೆಯಲಾಗಿದೆ. ಬದಲು, ಉತ್ಪಾದನೆಯಲ್ಲಿನ ಅಧಿಕ ಮೌಲ್ಯದಲ್ಲಿ ಲಾಭ, ಬಡ್ಡಿ, ಬಾಡಿಗೆಗಳ ಪಾಲು ಹೆಚ್ಚುತ್ತಿದೆ ಎಂದೂ, ಕೂಲಿ ಸಂಬಳಗಳ ಪಾಲು ಕಡಿಮೆಯಾಗುತ್ತಿದೆ ಎಂದೂ ವರದಿ ತಿಳಿಸುತ್ತಿದೆ. ಪರಿಣಾಮವಾಗಿ, ಕಳೆದ ಒಂದು ದಶಕದಿಂದ ಕಾರ್ಮಿಕರ, ನೌಕರರ ವೇತನದ ನಿಜಮೌಲ್ಯವು ಗಣನೀಯವಾಗಿ ಕುಸಿಯುತ್ತಿದ್ದು, ಅವರ ಗ್ರಾಹಕ ಶಕ್ತಿಯು ಕ್ಷಯಿಸುತ್ತಿದೆ, ಆಂತರಿಕ ಮಾರುಕಟ್ಟೆಯು ಕ್ಷೀಣಿಸುತ್ತಿದೆ, ಪೂರ್ಣಸಾಮರ್ಥ್ಯದಲ್ಲಿ ಉತ್ಪಾದನೆ ನಡೆಯುತ್ತಿಲ್ಲ ಎಂದು ವರದಿ ತಿಳಿಸಿದೆ.

ಬೆಲೆಏರಿಕೆ ಹಣದುಬ್ಬರಗಳನ್ನು ತಡೆಯಬೇಕಾದರೆ, ಬಡ್ಡಿ, ಬಾಡಿಗೆ, ಲಾಭಗಳಿಕೆಯನ್ನು ನಿಯಂತ್ರಿಸಬೇಕು ಮತ್ತು ಉತ್ಪಾದನೆ ಹೆಚ್ಚುವಂತೆ, ಅದಕ್ಕನುಗುಣವಾಗಿ ಆಂತರಿಕ ಮಾರುಕಟ್ಟೆ ದೊರಕುವಂತೆ, ಕಾರ್ಮಿಕರ ನೌಕರರ ವೇತನ ಹೆಚ್ಚಿಸಬೇಕು ಎಂದು ಆ ವಿಶೇಷ ವರದಿ ಸಲಹೆ ನೀಡಿದೆ. ಆದರೆ, ಇಂದಿರಾ ಸರಕಾರ ಹಿಡಿದ ದಾರಿ ಮುಷ್ಕರ ನಿಷೇಧ ಮತ್ತು ವೇತನ ಸ್ಥಂಭನ!

ಮುಷ್ಕರ-ಸಾಮಾಜಿಕ ನ್ಯಾಯ

ಉತ್ಪಾದನೆ ಹೆಚ್ಚಿಸಲು ಬಂಡವಾಳಶಾಹಿಗಳಿಗೆ, ಭೂಮಾಲಕರಿಗೆ ಸಕಲ ಸೌಕರ್ಯಗಳನ್ನು ಸರಕಾರ ನೀಡುತ್ತಿದೆ. ಆದರೆ, ನಿಜವಾದ ಉತ್ಪಾದಕರಾದ ಕಾರ್ಮಿಕರಿಗೆ, ನೌಕರರಿಗೆ ಜೀವನಾವಶ್ಯಕ ವೇತನವನ್ನೂ ನಿರಾಕರಿಸಲಾಗುತ್ತಿದೆ. ಆರ್ಥಿಕ ಅಭಿವೃದ್ಧಿಗೆ ಬೃಹತ್ ಪ್ರಮಾಣದಲ್ಲಿ ಅಪ್ರತ್ಯಕ್ಷ ತೆರಿಗೆ, ಕೃತಕ ಹಣಸೃಷ್ಟಿ, ದೇಶವಿದೇಶಗಳ ಸಾಲ, ಇತ್ಯಾದಿ ಜನವಿರೋಧಿ ಮಾರ್ಗಗಳಿಂದ ಸಂಪನ್ಮೂಲ ಸಂಗ್ರಹಿಸಲಾಗುತ್ತಿದೆ. ಜೊತೆಗೇ ಭ್ರಷ್ಟಾಚಾರ, ದುರಾಡಳಿತ, ಲಾಭಗುಳಿತನ, ಅಕ್ರಮ ಸಂಗ್ರಹ, ಕಳ್ಳವ್ಯಾಪಾರ, ಕಲಬೆರಿಕೆ, ಕಪ್ಪುಹಣದ ಚಲಾವಣೆ ಅವ್ಯಾಹತವಾಗಿ ನಡೆಯುತ್ತಿದೆ. ಇದರಿಂದ ನಿರೀಕ್ಷಿಸಿದಷ್ಟು ಉತ್ಪಾದನೆ ಆಗದೆ, ಆದ ಉತ್ಪಾದನೆ ನ್ಯಾಯಯುತವಾಗಿ ಜನರಿಗೆ ವಿತರಣೆ ಆಗದೆ, ಬೆಲೆಏರಿಕೆ ಹಣದುಬ್ಬರ ಉಂಟಾಗಿ ಕಾರ್ಮಿಕರ, ನೌಕರರ ವೇತನ ಹಾಗೂ ಜೀವನ ಮಟ್ಟ ಹದಗೆಡುತ್ತಿದೆ.

ಜೀವನಾವಶ್ಯಕ ವಸ್ತುಗಳಾದ ಆಹಾರಧಾನ್ಯ, ಸಕ್ಕರೆ, ಅಡಿಗೆತೈಲ, ಬೇಳೆಕಾಳು, ಸೀಮೆಎಣ್ಣೆ, ಇತ್ಯಾದಿಗಳನ್ನು ಮಧ್ಯವರ್ತಿಗಳಿಲ್ಲದೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ದೇಶಾದ್ಯಂತ ಜನರಿಗೆ ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸುಲಭ ಬೆಲೆಗೆ ಹಂಚಲು ಸರಕಾರ ತನ್ನ ಅಸಾಮರ್ಥ್ಯವನ್ನು ವ್ಯಕ್ತಪಡಿಸುತ್ತಿದೆ. ಸಾಮಾಜಿಕ ಅಪರಾಧಗಳನ್ನು ತಡೆಗಟ್ಟಲು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲು ಸರಕಾರ ಹಿಂದೇಟು ಹಾಕುತ್ತಿದೆ. ಕಾರಣ ಅದರ ಅಧಿಕಾರದ ಅಸ್ತಿಭಾರವೇ ಇಂತಹ ದುಷ್ಟಶಕ್ತಿಗಳಲ್ಲಿದೆ!

ಕಾರ್ಮಿಕರ ಕೂಲಿ ನಿಯಂತ್ರಣ, ಮುಷ್ಕರ ನಿಷೇಧಗಳನ್ನು ಮಾತ್ರ ಇಂದಿರಾಗಾಂಧಿ ಸರಕಾರ ಜಾರಿಗೊಳಿಸುತ್ತಿದೆ. ಆದರೆ, 1981ರ ವರ್ಷ 1975ರವರ್ಷದಂತಲ್ಲ ಎಂದು ಇಂದಿರಾ ಸರಕಾರ ಮರೆಯಕೂಡದು. ಕಾರ್ಮಿಕರ ಸಂಘಟನೆಯು ಬಲಗೊಳ್ಳುತ್ತಿದೆ, ಎಡ-ಪ್ರಜಾಪ್ರಭುತ್ವ ಶಕ್ತಿಗಳು ಒಟ್ಟುಗೂಡುತ್ತಿವೆ. ಕೇರಳ, ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳ ವಾಮಪಂಥೀಯ ಸರಕಾರಗಳು ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ವಿರೋಧಿಸುತ್ತಿವೆ. ಜನತಾ ಸರಕಾರದ ಅವಧಿಯಲ್ಲಿ ಕೈಗಾರಿಕಾ ಸಂಬಂಧಗಳ ಮಸೂದೆ, ಭೂತಲಿಂಗಂ ಸಮಿತಿಯ ಸಲಹೆಗಳಲ್ಲಿಯೂ ಮುಷ್ಕರ ನಿಷೇಧಿಸುವ ಮತ್ತು ವೇತನ ಸ್ಥಂಭನಗೊಳಿಸುವ ಸೂಚನೆಗಳಿದ್ದವು. ಆದರೆ, ಕಾರ್ಮಿಕರ ಐಕ್ಯ ಹೋರಾಟದಿಂದ ಅಂತಹ ಶಾಸನವನ್ನಾಗಲೀ, ಕ್ರಮವನ್ನಾಗಲೀ ಜಾರಿಗೊಳಿಸದುತಾಯಿತು. ಹಾಗೆಯೇ ಇಂದು ಕಾರ್ಮಿಕರ ಹಾಗೂ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯ ಹೋರಾಟಗಳಿಂದ ಈ ಕರಾಳ ಶಾಸನವು ಜಾರಿಯಾಗದಂತೆ ತಡೆಗಟ್ಟಬಹುದು.

ಅಸಮಾನತೆಯ ಬಂಡವಾಳಶಾಹಿ ಸಮಾಜದಲ್ಲಿ ಮುಷ್ಕರ ಹೂಡುವ ಹಕ್ಕು ಸಾಮಾಜಿಕ ನ್ಯಾಯ ಪಡೆಯಲು ಪ್ರಬಲ ಅಸ್ತ್ರವಾಗಿದೆ. ಮುಷ್ಕರ ಹೂಡುವುದೇ ಅಪರಾಧ ಎಂದು ಶಾಸನ ಮಾಡುವವರು ಚರಿತ್ರೆಯಲ್ಲಿ ಒಂದಲ್ಲ ಒಂದುದಿನ ಅಪರಾಧಿಗಳ ಸ್ಥಾನದಲ್ಲಿರಬೇಕಾದೀತು! ●

ಬೃಹತ್ ಮತಪ್ರದರ್ಶನ

(1ನೇ ಪುಟದಿಂದ)

(ದಾರಾ ಗುಂಪು)ಗಳ ಧುರೀಣರು ಮಾತನಾಡಿ ಸುಗ್ರೀವಾಜ್ಞೆಯನ್ನು ಉಗ್ರವಾಗಿ ಪ್ರತಿಭಟಿಸಿದರು.

ಸಂಸತ್ತಿನಲ್ಲಿ

ಮುಷ್ಕರ ನಿಷೇಧ ಸುಗ್ರೀವಾಜ್ಞೆ ಮತ್ತಿತರ ಕೆಲವು ಸುಗ್ರೀವಾಜ್ಞೆಗಳನ್ನು ಪ್ರತಿಭಟಿಸಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಲೋಕಸಭೆಯಲ್ಲಿ ಸಭಾತ್ಯಾಗ ಮಾಡಿದರು.

18ರಂದು ರಾಜ್ಯಸಭೆಯಲ್ಲೂ ವಿರೋಧ ಪಕ್ಷಗಳ ಸದಸ್ಯರು ಸುಗ್ರೀವಾಜ್ಞೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು.

ಕರ್ನಾಟಕದಲ್ಲಿ

ರಾಜ್ಯದ ಅನೇಕ ಕಡೆ ಎನ್.ಸಿ.ಸಿ.ಯು ಕರೆಯ ಮೇರೆಗೆ ಕಪ್ಪುದಿನ ಆಚರಿಸಲಾಯಿತು. ಈ ಕುರಿತು ರಾಜ್ಯದ ಎಲ್ಲಕಡೆಗಳಿಂದ ವರದಿಗಳು ಬರುತ್ತಿವೆ.

ದಾಂಡೇಲಿಯಲ್ಲಿ ಪೇಪರ್ ಮಿಲ್, ಇ.ಎಂ.ಡಬ್ಲ್ಯು, ಬ್ಯಾಂಕ್‌ನ ಮೊದಲಾದ ಕಾರ್ಮಿಕರು ಕಪ್ಪು ಬ್ಯಾಡ್ಜ್‌ಗಳನ್ನು ಧರಿಸಿ ಸುಗ್ರೀವಾಜ್ಞೆಗೆ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು. ಸಾಯುಂಕಾಲ ಬೃಹತ್ ಮೆರವಣಿಗೆ ಹೊರಡಿಸಲಾಗಿತ್ತು.

ಉಡುಪಿಯಲ್ಲಿ ಮತ್ತು ಸುತ್ತಮುತ್ತಲಿನ ಎಲ್ಲ ಕಾರ್ಖಾನೆ, ಕಚೇರಿಗಳ ಎದುರು ಕಪ್ಪುಧ್ವಜಗಳನ್ನು ಏರಿಸಿದ ಕಾರ್ಮಿಕರು, ನೌಕರರು ದಿನವಿಡೀ ಕಪ್ಪು ಬ್ಯಾಡ್ಜ್‌ಗಳನ್ನು ಧರಿಸುವ ಮೂಲಕ ಸುಗ್ರೀವಾಜ್ಞೆಗೆ ಪ್ರತಿಭಟನೆ ವ್ಯಕ್ತಪಡಿಸಿದರು.

ಸಂಜೆ ನಡೆದ ಮೆರವಣಿಗೆಯಲ್ಲಿ ಸಾವಿರಕ್ಕೂ ಮಿಕ್ಕಿ ಕಾರ್ಮಿಕರು ಪಾಲ್ಗೊಂಡಿದ್ದರು. ನಂತರ ಬಹಿರಂಗಸಭೆಯುನ್ನುದ್ದೇಶಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳ, ಬ್ಯಾಂಕ್, ಎಲ್ಲೈಸಿ, ಕೆ.ಇ.ಬಿ., ಪಿ.ಅಂಡ್‌ಟಿ.ಗಳ ಕಾರ್ಮಿಕ ಪ್ರತಿನಿಧಿಗಳು ಮಾತನಾಡಿದರು.

ಹಾಸನದಲ್ಲಿ ಸುಗ್ರೀವಾಜ್ಞೆಯನ್ನು ಪ್ರತಿಭಟಿಸಿ ಬೃಹತ್ ಮೆರವಣಿಗೆ ಹೊರಡಿಸಲಾಗಿತ್ತು. ಮೆರವಣಿಗೆಯಲ್ಲಿ ನೂರಾರು ಮಹಿಳಾ ಕಾರ್ಮಿಕರು ಭಾಗವಹಿಸಿದ್ದರು. ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಎ. ಐ. ಟಿ. ಯು. ಸಿ.ಯ ಕಾಂ. ಸುಜಾತ ರಾಧಾಕೃಷ್ಣ ಮತ್ತು ಸಿ.ಐ.ಟಿ.ಯು.ನ ಕಾಂ. ಸುಕುಮಾರ ಮಾತನಾಡಿ ಸುಗ್ರೀವಾಜ್ಞೆಯನ್ನು ವಾಪಸ್ ತೆಗೆದುಕೊಳ್ಳುವಂತೆ ಒತ್ತಾಯಿಸಿದರು. ಈ ಕುರಿತು ಹಾಸನ ವಿಭಾಗಾಧಿಕಾರಿಯುವರಿಗೆ ಮನವಿ ಸಲ್ಲಿಸಲಾಯಿತು.

ಹಾಸನ ಜಿಲ್ಲೆಯ ಸಕಲೇಶಪುರದಲ್ಲೂ ಎಲ್ಲ ಕಾರ್ಮಿಕ ಸಂಘಟನೆಗಳ ಕಾರ್ಮಿಕರು ಕಪ್ಪು ಬ್ಯಾಡ್ಜ್ ಧರಿಸಿ ಮೆರವಣಿಗೆ ಹೊರಡಿಸಿ ಸಕಲೇಶಪುರದ ಉಪವಿಭಾಗಾಧಿಕಾರಿಗೆ ಮನವಿ ಸಲ್ಲಿಸಿದರು. ○

ಗಮನಿಸಿ

ಕಳೆದ ವಾರ (16-8-81)ದ ಪತ್ರಿಕೆಯಲ್ಲಿ 3ನೇ ಪೇಜಿನ ಕಾಂ. ವಿ. ಜೆ. ಕೆ. ನಾಯರ್‌ರ ಲೇಖನ 'ಸಾಮ್ರಾಜ್ಯವಾದಿಗಳ ಕುತಂತ್ರಗಳು: ಆಳುವ ವರ್ಗದ ಮೋಸಗಳು' ಮೊದಲ ಕಂತು ಪ್ರಕಟವಾಗಿತ್ತು. ಈ ಸಲ ಅನಿವಾರ್ಯ ಕಾರಣಗಳಿಂದಾಗಿ ಎರಡನೇ ಭಾಗವನ್ನು ಪ್ರಕಟಿಸಲಾಗಿಲ್ಲ. 30-8-81ರ ಪತ್ರಿಕೆಯಲ್ಲಿ ಈ ಲೇಖನದ ಉತ್ತರಾರ್ಧವನ್ನು ಪ್ರಕಟಿಸಲಾಗುವದು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT